## ದಿನಾಂಕ: 13.08.2024ರಂದು ನಡೆದ ಪ್ರಶಿಕ್ಷಣ ಪರಿಷತ್‌ನ 40ನೇ ಸಭೆಯ ನಡಾವಳಿ

ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯದ ಪ್ರಶಿಕ್ಷಣ ಪರಿಷತ್ತಿನ 40ನೇ ಸಭೆಯನ್ನು ಮಾನ್ಯ ಕುಲಪತಿಗಳ ಅಧ್ಯಕ್ಷತೆಯಲ್ಲಿ **ದಿನಾಂಕ: 13-08-2024** ಮಂಗಳವಾರ ಬೆಳಿಗ್ಗೆ 11.30 ಗಂಟೆಗೆ ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯದ ಸಿಂಡಿಕೇಟ್ ಸಭಾಂಗಣದಲ್ಲಿ ಕರೆಯಲಾಗಿತ್ತು.

### ಸಭೆಯಲ್ಲಿ ಹಾಜರಿದ್ದವರು:

1. ಡಾ. ಅಹಲ್ಯಾ ಎಸ್., ಕುಲಪತಿಗಳು, ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯ – ಅಧ್ಯಕ್ಷರು
2. ಶ್ರೀ ಬಲವಂತರಾವ್ ಪಾಟೀಲ್, ಜಂಟಿ ನಿರ್ದೇಶಕರು, ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯ – ಸದಸ್ಯರು
3. ಪ್ರೊ. ವಿ ಗಿರೀಶ್ ಚಂದ್ರ, ಡೀನ್, ಭಾಷಾ ನಿಕಾಯ, ಕ.ಸಂ.ವಿ. – ಸದಸ್ಯರು
4. ಪ್ರೊ. ಸಿ. ಪಾಲಯ್ಯ, ಡೀನ್, ಪ್ರಾಚೀನ ಭಾರತೀಯ ವಿಜ್ಞಾನ ನಿಕಾಯ, ಕ.ಸಂ.ವಿ. – ಸದಸ್ಯರು
5. ಡಾ. ಎಸ್. ದಯಾಶಂಕರ್, ಪ್ರಾಚಾರ್ಯರು, ಶ್ರೀ ಚಾಮರಾಜೇಂದ್ರ ಸಂಸ್ಕೃತ ಕಾಲೇಜು, ಪಂಪಮಹಾಕವಿ ರಸ್ತೆ, ಚಾಮರಾಜಪೇಟೆ, ಬೆಂಗಳೂರು-560018 – ಸದಸ್ಯರು
6. ಡಾ. ಶ್ರೀಕಾಂತ ಪುರೋಹಿತ್, ಪ್ರಾಚಾರ್ಯರು, ಶ್ರೀ ಕಾಲಭೈರವೇಶ್ವರ ಸಂಸ್ಕೃತ ವೇದ ಆಗಮ ಕಾಲೇಜು, ಶ್ರೀ ಆದಿಚುಂಚನಗಿರಿ ಕ್ಷೇತ್ರ, ನಾಗಮಂಗಲ ತಾಲ್ಲೂಕು, ಮಂಡ್ಯ ಜಿಲ್ಲೆ -571811 – ಸದಸ್ಯರು
7. ಡಾ. ನಾಗಪತಿ ಕೇಶವ ಭಟ್ಟ, ಪ್ರಾಚಾರ್ಯರು, ಶ್ರೀ ರಾಘವೇಂದ್ರ ಭಾರತೀ ಸವೇದ ಸಂಸ್ಕೃತ ಕಾಲೇಜು, ಸುಬ್ರಹ್ಮಣ್ಯ ಸುರಕಟ್ಟೆ, ಹೊನ್ನಾವರ, ಉತ್ತರ ಕನ್ನಡ ಜಿಲ್ಲೆ -581334 –ಸದಸ್ಯರು
8. ವಿದ್ವಾನ್ ಆರ್.ಪಿ. ಜೋಶಿ, ಪ್ರಾಚಾರ್ಯರು, ಶ್ರೀ ಲಕ್ಷ್ಮೀನರಸಿಂಹ ಸಂಸ್ಕೃತ ಕಾಲೇಜು, ಜಮಖಂಡಿ ಬಾಗಲಕೋಟೆ ಜಿಲ್ಲೆ -587301 – ಸದಸ್ಯರು
9. ಡಾ. ರಾಮಕೃಷ್ಣ ಭಟ್ ಕೆ., ಕುಲಸಚಿವರು (ಮೌಲ್ಯಮಾಪನ)(ಪ್ರ) , ಕ.ಸಂ.ವಿ. – ಆಹ್ವಾನಿತರು
10. ಶ್ರೀ ವಿಶ್ವನಾಥ ಪಿ. ಹಿರೇಮಠ, ಕ.ಆ.ಸೇ., ಕುಲಸಚಿವರು, ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯ. –ಸದಸ್ಯ ಕಾರ್ಯದರ್ಶಿಗಳು

### ಗೈರು ಹಾಜರಾದವರು:

1. ಪ್ರಧಾನ ಕಾರ್ಯದರ್ಶಿಗಳು, ಉನ್ನತ ಶಿಕ್ಷಣ ಇಲಾಖೆ, ಬಹುಮಹಡಿಗಳ ಕಟ್ಟಡ, ಬೆಂಗಳೂರು
2. ಅಪರ ಮುಖ್ಯ ಕಾರ್ಯದರ್ಶಿಗಳು, ಹಣಕಾಸು ಇಲಾಖೆ, ವಿಧಾನ ಸೌಧ, ಬೆಂಗಳೂರು.
3. ಪ್ರಧಾನ ಕಾರ್ಯದರ್ಶಿಗಳು, ಕಂದಾಯ ಇಲಾಖೆ (ಧಾರ್ಮಿಕ ದತ್ತಿ ವಿಭಾಗ)
4. ನಿರ್ದೇಶಕರು, ಪ್ರಾಚ್ಯವಸ್ತು ಮತ್ತು ಸಂಗ್ರಹಾಲಯ ನಿರ್ದೇಶನಾಲಯ, ಅರಮನೆ ಆವರಣ ಮೈಸೂರು.
5. ಪ್ರೊ. ವೀರನಾರಾಯಣ ಎನ್.ಕೆ. ಪಾಂಡುರಂಗಿ, ಡೀನ್, ವೇದಾಂತ ನಿಕಾಯ, ಕ.ಸಂ.ವಿ.
6. ಪ್ರೊ. ಶಿವಾನಿ ವಿ., ಡೀನ್, ಶಾಸ್ತ್ರ ನಿಕಾಯ, ಕ.ಸಂ.ವಿ.

ಸಭೆಯ ಆರಂಭದಲ್ಲಿ ಕುಲಸಚಿವರು ಪ್ರಾಸ್ತಾವಿಕವಾಗಿ ಮಾತನಾಡಿ ಸ್ವಾಗತಿಸಿದರು. ನಂತರ ಕಾರ್ಯಸೂಚಿಯಂತೆ ವಿಷಯವಾರು ಚರ್ಚಿಸಿ ನಿರ್ಣಯ ಕೈಗೊಳ್ಳಲಾಯಿತು.

| ವಿ. ಸಂಖ್ಯೆ | ವಿಷಯ ಮತ್ತು ಟಿಪ್ಪಣಿ |
|---|---|
| ವಿಷಯ 01 | **ಪ್ರಶಿಕ್ಷಣ ಪರಿಷತ್ತಿನ 38ನೇ ಸಭೆಯ ಅನುಪಾಲನಾ ವರದಿಯನ್ನು ಅನುಮೋದಿಸುವ ಬಗ್ಗೆ.** |
| ಟಿಪ್ಪಣಿ | ದಿನಾಂಕ: 06.03.2024 ರಂದು ನಡೆದ ಪ್ರಶಿಕ್ಷಣ ಪರಿಷತ್ತಿನ 38ನೇ ಸಭೆಯ ಅನುಪಾಲನಾ ವರದಿಯನ್ನು ಸಭೆಯ ಅನುಮೋದನೆಗಾಗಿ ಮಂಡಿಸಿದೆ. |
| ನಿರ್ಣಯ | **ಪ್ರಶಿಕ್ಷಣ ಪರಿಷತ್ತಿನ 38ನೇ ಸಭೆಯ ಅನುಪಾಲನಾ ವರದಿಯನ್ನು ಸಭೆಯು ಅನುಮೋದಿಸಿತು.** |
| ವಿಷಯ 02 | **ಶೈಕ್ಷಣಿಕ ಮತ್ತು ಸಂಶೋಧನೆ ವಿಷಯವಾಗಿ ಒಪ್ಪಂದವನ್ನು ಮಾಡಿಕೊಳ್ಳುವ ಬಗ್ಗೆ.** |
| ಟಿಪ್ಪಣಿ | ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯವು **Central Sanskrit University, 56-57, Institutional Area, Janakpur New Delhi-110058** ಈ ಸಂಸ್ಥೆಯೊಂದಿಗೆ ಶೈಕ್ಷಣಿಕ ಮತ್ತು ಸಂಶೋಧನೆ ವಿಷಯವಾಗಿ ಒಪ್ಪಂದವನ್ನು ಮಾಡಿಕೊಳ್ಳುತ್ತಿದ್ದು, ಪ್ರಶಿಕ್ಷಣ ಪರಿಷತ್ ಅನುಮೋದನೆಗಾಗಿ ಮಂಡಿಸಿದೆ. |
| ನಿರ್ಣಯ | **Central Sanskrit University, 56-57, Institutional Area, Janakpur New Delhi-110058 ಈ ಸಂಸ್ಥೆಯೊಂದಿಗೆ ಒಪ್ಪಂದವನ್ನು ಮಾಡಿಕೊಳ್ಳಲು ಸಭೆಯು ಅನುಮೋದಿಸಿತು.** |
| ವಿಷಯ 03 | **ಯೋಗ ಅಧ್ಯಯನ ಮತ್ತು ಸಂಶೋಧನಾ ಕೇಂದ್ರದ ಮಾನ್ಯತೆ ನವೀಕರಣದ ಬಗ್ಗೆ.** |
| ಟಿಪ್ಪಣಿ | ಶ್ರೀ ಪತಂಜಲಿ ಯೋಗ ಅಧ್ಯಯನ ಮತ್ತು ಸಂಶೋಧನಾ ಕೇಂದ್ರವು ಮೈಸೂರು ಹಾಗೂ ತುಮಕೂರು ನಗರದಲ್ಲಿ ಯೋಗ ಸರ್ಟಿಫಿಕೇಟ್ ಡಿಪ್ಲೋಮಾ ಹಾಗೂ ಪಿಜಿ ಡಿಪ್ಲೋಮೋ ತರಗತಿಗಳನ್ನು ನಡೆಸಲು 2019–20ನೇ ಸಾಲಿನಿಂದ 2022–2023ನೇ ಸಾಲಿನವರೆಗೆ ನಮ್ಮ ವಿಶ್ವವಿದ್ಯಾಲಯದಿಂದ ಅನುಮತಿಯನ್ನು ಪಡೆದಿತ್ತು. 2023–24ನೇ ಸಾಲಿನಿಂದ ಮಾನ್ಯತೆ ನವೀಕರಿಸಲು ತ್ರಿಸದಸ್ಯ ಸಮಿತಿಯು ಸದರಿ ಕೇಂದ್ರಗಳಿಗೆ ಭೇಟಿ ನೀಡಿ, ಸದರಿ ಸಂಸ್ಥೆಯು ಅಗತ್ಯ ಮೂಲಭೂತ ಸೌಕರ್ಯವನ್ನು ಹೊಂದಿದ್ದು, ಮಾನ್ಯತೆಯ ಮಾನದಂಡಗಳನ್ನು ಪೂರೈಸಿರುವುದರಿಂದ ಮಾನ್ಯತೆ ನವೀಕರಣ ಮಾಡಬಹುದೆಂದು ವರದಿಯನ್ನು ಸಲ್ಲಿಸಿದೆ. ಅದರಂತೆ ಈ ಸಂಸ್ಥೆಗೆ 2023–24ನೇ ಸಾಲಿನಿಂದ 3 ವರ್ಷದ ಅವಧಿಗೆ ಮಾನ್ಯತೆ ನವೀಕರಿಸಲು ಸಭೆಯ ಅನುಮೋದನೆಗಾಗಿ ಮಂಡಿಸಿದೆ. |
| ನಿರ್ಣಯ | **ಶ್ರೀ ಪತಂಜಲಿ ಯೋಗ ಅಧ್ಯಯನ ಮತ್ತು ಸಂಶೋಧನಾ ಕೇಂದ್ರದ ಮಾನ್ಯತೆ ನವೀಕರಣಕ್ಕೆ ಸಭೆಯು ಅನುಮೋದಿಸಿತು. ಮುಂದುವರಿದು, ಕಾಲೇಜಿನ ಸಂಯೋಜನೆಯ ಪ್ರಕ್ರಿಯೆಯಂತೆ ಸಂಶೋಧನಾ ಕೇಂದ್ರದ ಮಾನ್ಯತೆಯನ್ನೂ ಸಹ ನಿಯಮಿತವಾಗಿ ವರ್ಷದಲ್ಲಿ ಒಮ್ಮೆ ಕೈಗೊಳ್ಳಬೇಕು. ಇದಕ್ಕಾಗಿ ಪ್ರತಿ ವರ್ಷವೂ ವೇಳಾ ಪಟ್ಟಿಯನ್ನು ಸಿದ್ಧಪಡಿಸಿ, ಅರ್ಜಿ ಆಹ್ವಾನ, ಪರಿಶೀಲನಾ ಸಮಿತಿಯ ಭೇಟಿ ಮೊದಲಾದ ಮಾನ್ಯತಾ ಪ್ರಕ್ರಿಯೆಯನ್ನು ನಿಗದಿತ ವೇಳಾಪಟ್ಟಿಯಂತೆ ನಡೆಸಲು ಸಭೆಯು ಸೂಚಿಸಿತು.** |
| ವಿಷಯ 04 | **ಕಾಲೇಜುಗಳಿಗೆ ಸಂಯೋಜನೆಯನ್ನು ನೀಡುವ ಬಗ್ಗೆ.** |
| ಟಿಪ್ಪಣಿ | ಸರ್ಕಾರದ ಆದೇಶದಂತೆ ಎಲ್ಲಾ ಸಂಯೋಜನೆಯ ಪ್ರಸ್ತಾವನೆಗಳನ್ನು UUCMS ಪೋರ್ಟಲ್ ಮೂಲಕ ಆನ್‌ಲೈನ್ ನಲ್ಲಿಯೇ ಸರ್ಕಾರಕ್ಕೆ ಸಲ್ಲಿಸಬೇಕು. ಈ ಹಿನ್ನೆಲೆಯಲ್ಲಿ ವಿಶ್ವವಿದ್ಯಾಲಯವು 2024–25ನೇ ಸಾಲಿಗೆ ಸಂಸ್ಕೃತ ಕಾಲೇಜುಗಳ |

ಸಂಯೋಜನೆ/ಹೊಸದಾಗಿ ಮಾನ್ಯತೆ/ಹೊಸಕಾಲೇಜುಗಳಿಗೆ ಅನುಮತಿ/ಸಂಯೋಜನೆಗಾಗಿ ಸ್ಥಳೀಯ ಪರಿಶೀಲನಾ ಸಮಿತಿಯನ್ನು ರಚಿಸಿತ್ತು. ಸ್ಥಳೀಯ ಪರಿಶೀಲನಾ ಸಮಿತಿಯು ಆಯಾ ಕಾಲೇಜುಗಳಿಗೆ ಭೇಟಿ ನೀಡಿ UUCMS ಪೋರ್ಟಲ್ ನಲ್ಲಿ ವರದಿ ಸಲ್ಲಿಸಿದ್ದು, ವಿವರ ಈ ಕೆಳಕಂಡಂತಿದೆ.

**ಸಂಯೋಜನೆ ನವೀಕರಣಗೊಂಡ ಒಟ್ಟು ಕಾಲೇಜುಗಳು: 29.**

| ಕ್ರ. ಸಂ. | ಕಾಲೇಜಿನ ಹೆಸರು |
|---|---|
| 1 | ಶ್ರೀ ಮನ್ಮಹಾರಾಜಾ ಸಂಸ್ಕೃತ ಕಾಲೇಜು, ನ್ಯೂ ಸಯ್ಯಾಜಿರಾವ್ ರೋಡ್, ಮೈಸೂರು–24 |
| 2 | ಶ್ರೀ ಸರ್ಕಾರಿ ಸಂಸ್ಕೃತ ಕಾಲೇಜು ಮೇಲುಕೋಟೆ,571431 |
| 3 | ಶ್ರೀ ಕಾಲಭೈರವೇಶ್ವರ ಸಂಸ್ಕೃತ ವೇದ ಆಗಮ ಕಾಲೇಜು, ಶ್ರೀ ಆದಿಚುಂಚನಗಿರಿ ಕ್ಷೇತ್ರ, ನಾಗಮಂಗಲ ತಾಲ್ಲೂಕು ಮಂಡ್ಯ 571811 |
| 4 | ಶ್ರೀ ಮಲೆಮಹದೇಶ್ವರ ಸಂಸ್ಕೃತ ಕಾಲೇಜು, ಕೊಳ್ಳೇಗಾಲ, ಚಾಮರಾಜನಗರ ಜಿಲ್ಲೆ |
| 5 | ಶ್ರೀ ಶಂಕರ ವಿಲಾಸ ಸಂಸ್ಕೃತ ಕಾಲೇಜು, ಶ್ರೀ ಅರಮನೆ ಜಪದಕಟ್ಟೆಮಠ, ಶಂಕರಮಠದ ರಸ್ತೆ, 2ನೇ ಅಡ್ಡರಸ್ತೆ,<br>ಖಿಲ್ಲೆಮೊಹಲ್ಲಾ, ಮೈಸೂರು–57000 |
| 6 | ಜೆ. ಎಸ್. ಎಸ್. ಸಂಸ್ಕೃತ ಕಾಲೇಜು,<br>ಸುತ್ತೂರು –571 129, ನಂಜನಗೂಡು ತಾ॥, ಮೈಸೂರು ಜಿ॥ |
| 7 | ಶ್ರೀಮನ್ಮಧ್ವಸಿದ್ಧಾಂತ ಪ್ರಬೋಧಿನೀ ಸಂಸ್ಕೃತ ಕಾಲೇಜು, ಉಡುಪಿ – 576 10 |
| 8 | ಶ್ರೀ ಮೇಧಾ ದಕ್ಷಿಣಾಮೂರ್ತಿ ವೇದಭವನ ಸಂಸ್ಕೃತ ಕಾಲೇಜು, ಗೋಕರ್ಣ, ಕುಮಟ ತಾಲ್ಲೂಕು, ಉತ್ತರಕನ್ನಡ ಜಿಲ್ಲೆ. |
| 9 | ಶ್ರೀ ಶ್ರೀಮಾತಾ ಸಂಸ್ಕೃತ ಕಾಲೇಜು. ಉಮ್ಮಚಗಿ, ಯಲ್ಲಾಪುರ ತಾಲೂಕು, ಉತ್ತರ ಕನ್ನಡ ಜಿಲ್ಲೆ – 581 347 |
| 10 | ಶ್ರೀ ರಾಜರಾಜೇಶ್ವರೀ ಸಂಸ್ಕೃತ ಕಾಲೇಜು, ಸೋಂದಾ ಸ್ವರ್ಣವಲ್ಲೀ ಮಠ, ಮಠದೇವಳ ಅಂಚೆ – 581336 ಶಿರಸಿ ತಾಲ್ಲೂಕು, ಉ.ಕ. ಜಿಲ್ಲೆ |
| 11 | ಶ್ರೀ ರಾಘವೇಂದ್ರ ಭಾರತೀ ಸವೇದ ಸಂಸ್ಕೃತ ಕಾಲೇಜು, ಸುಬ್ರಹ್ಮಣ್ಯ ಸುರಕಟ್ಟೆ, ಹೊನ್ನಾವರ – 581 334, ಉ.ಕ. ಜಿಲ್ಲೆ |
| 12 | ಶ್ರೀ ಚಾಮರಾಜೇಂದ್ರ ಸಂಸ್ಕೃತ ಕಾಲೇಜು, ಪಂಪಮಹಾಕವಿ ರಸ್ತೆ ಚಾಮರಾಜಪೇಟೆ, ಬೆಂಗಳೂರು–560018 |
| 13 | ಪೂರ್ಣಪ್ರಜ್ಞ ವಿದ್ಯಾಪೀಠ ಸಂಸ್ಕೃತ ಕಾಲೇಜು, ಪೂರ್ಣಪ್ರಜ್ಞ ನಗರ, ಕತ್ತರಿಗುಪ್ಪೆ, ಮುಖ್ಯರಸ್ತೆ,<br>ಬೆಂಗಳೂರು–560 028 |
| 14 | ಶ್ರೀ ನಿರ್ವಾಣಸ್ವಾಮಿ ಸಂಸ್ಕೃತ ಕಾಲೇಜು, ಶ್ರೀದೇಗುಲಮಠ, ಕನಕಪುರ–562117 ರಾಮನಗರ ಜಿಲ್ಲೆ. |
| 15 | ಶ್ರೀ ರುದ್ರೇಶ್ವರ ಸಂಸ್ಕೃತ ಕಾಲೇಜು, ರಾಜಘಟ್ಟ ಗ್ರಾಮ, ಕಸಬಾ ಹೋಬಳಿ, ದೊಡ್ಡಬಳ್ಳಾಪುರ ತಾ॥,<br>ಬೆಂಗಳೂರು ಗ್ರಾಮಾಂತರ ಜಿಲ್ಲೆ – 561203 |
| 16 | ಶ್ರೀ ಬಸವೇಶ್ವರ ಸಂಸ್ಕೃತ ಕಾಲೇಜು, ಪವಾಡ ಶ್ರೀ ಬಸವಣ್ಣ ದೇವರಮಠ, ನೆಲಮಂಗಲ, ಬೆಂಗಳೂರು<br>ಗ್ರಾಮಾಂತರ ಜಿಲ್ಲೆ – |
| 17 | ಶ್ರೀ ವೇದವಿಜ್ಞಾನ ಶೋಧ ಸಂಸ್ಥಾನ (ರಿ) ಸಂಸ್ಕೃತ ಕಾಲೇಜು ಚನ್ನೇನಹಳ್ಳಿ, ಮಾಗಡಿ ರಸ್ತೆ,<br>ಬೆಂಗಳೂರು–562130 |
| 18 | ಪೂರ್ಣಪ್ರಜ್ಞ ವಿದ್ಯಾಪೀಠ ವೇದಾಂತ ಗುರುಕುಲಂ ಸಂಸ್ಕೃತ ಕಾಲೇಜು, ಕತ್ತರಿಗುಪ್ಪೆ ಮುಖ್ಯರಸ್ತೆ,<br>ಬೆಂಗಳೂರು–560 028 |

| | |
|---|---|
| 19 | ವೇದವಿಜ್ಞಾನ ಮಹಾವಿದ್ಯಾಪೀಠ ವೇದ ಆಗಮ ಸಂಸ್ಕೃತ ಮಹಾ ಪಾಠಶಾಲೆ, ವೇದ ವಿಭಾಗ, ಕನಕಪುರ ರಸ್ತೆ, ಉದಯಪುರ, ಬೆಂಗಳೂರು,560082 |
| 20 | ಶ್ರೀ ಸಿದ್ಧಲಿಂಗೇಶ್ವರ ವೇದ ಸಂಸ್ಕೃತ ಕಾಲೇಜು, ಸಿದ್ಧಗಂಗಾ ಮಠ, ತುಮಕೂರು –572 104 |
| 21 | ಶ್ರೀ ಫಿರಂಗಿಸ್ವಾಮಿ ಸಂಸ್ಕೃತ ಕಾಲೇಜು, ಅಂಕನಹಳ್ಳಿ ಮಠ, ಕುಣಿಗಲ್ ತಾಲ್ಲೂಕು, ತುಮಕೂರು ಜಿಲ್ಲೆ |
| 22 | ಶ್ರೀ ಜಗದ್ಗುರು ಗುರುಬಸವೇಶ್ವರ ಸಂಸ್ಕೃತ ಕಾಲೇಜು, ಶ್ರೀ ಬೆಕ್ಕಿನಕಲ್ಮಠ, ಶ್ರೀ ಮಲ್ಲಿಕಾರ್ಜುನ ಮುರುಘರಾಜೇಂದ್ರ ವೃತ್ತ, ಶಿವಮೊಗ್ಗ–577202 |
| 23 | ಶ್ರೀ ಪೂರ್ಣ ಪ್ರಜ್ಞಾ ಸಂಸ್ಕೃತ ಕಾಲೇಜು. ರಾಜೇಂದ್ರ ನಗರ, ಚಿತ್ರದುರ್ಗ |
| 24 | ಶ್ರೀ ಚನ್ನಮಲ್ಲಿಕಾರ್ಜುನಸ್ವಾಮಿ ಸಂಸ್ಕೃತ ಕಾಲೇಜು, ಹಿರೇಕಲ್ಮಠ, ಹೊನ್ನಾಳಿ, ದಾವಣಗೆರೆ ಜಿಲ್ಲೆ – 577217 |
| 25 | ಶ್ರೀ ಲಕ್ಷ್ಮೀನರಸಿಂಹ ಸಂಸ್ಕೃತ ಕಾಲೇಜು, ಜಮಖಂಡಿ – 587 301 ಬಾಗಲಕೋಟೆ ಜಿಲ್ಲೆ |
| 26 | ಶ್ರೀ ಗಜಾನನ ಸಂಸ್ಕೃತ ಕಾಲೇಜು, ಸೂಡಿ, ರೋಣ ತಾಲ್ಲೂಕು, ಗದಗ ಜಿಲ್ಲೆ |
| 27 | ಸಿ. ಎಲ್. ವೈ. ಸಂಸ್ಕೃತ ಕಾಲೇಜು, ಕುಮಾರೇಶ್ವರ ನಗರ, ಬೆಳಗಾವಿ ರಸ್ತೆ, ಧಾರವಾಡ – 580 008. |
| 28 | ಶ್ರೀ ಗುರುಸಾರ್ವಭೌಮ ವೇದ ಸಂಸ್ಕೃತ ಕಾಲೇಜು, ಎನ್. ಎಸ್.ಆರ್. ಎಸ್. ಮಠ, ಜವಾಹರ ನಗರ, ರಾಯಚೂರು |
| 29 | ಶ್ರೀಮದ್ ಆದಿಜಗದ್ಗುರು ಶ್ರೀ ಸಿದ್ಧಲಿಂಗೇಶ್ವರ ಮಹಾಸ್ವಾಮಿಗಳ ಸಂಸ್ಕೃತ ಮತ್ತು ವೇದ ಮಹಾವಿದ್ಯಾಲಯ, ಮಧುರಖಂಡಿ, ಕಮರೀಮಠ, ನಂದೀಶ್ವರ, ಅಥಣಿ, ಬೆಳಗಾವಿ ಜಿಲ್ಲೆ, |

ಈ ವಿಷಯವನ್ನು ಸಭೆಯ ಅನುಮೋದನೆಗಾಗಿ ಮಂಡಿಸಿದೆ.

| | |
|---|---|
| ನಿರ್ಣಯ | **ಕಾಲೇಜಿನ ಮೂಲಭೂತ ಸೌಕರ್ಯ, ಶಿಕ್ಷಕರ ವಿದ್ಯಾರ್ಹತೆ ಮೊದಲಾದವುಗಳನ್ನು ಖಚಿತಪಡಿಸಿಕೊಳ್ಳಬೇಕು ಎಂದು ಮಾನ್ಯ ಸದಸ್ಯಾರಾದ ಪ್ರೊ. ಸಿ. ಪಾಲಯ್ಯ ಅವರು ಅಭಿಪ್ರಾಯಿಸಿದರು. ಸ್ಥಳೀಯ ತಪಾಸಣಾ ಸಮಿತಿಯು (LIC) ಇವುಗಳನ್ನು ಪರಿಶೀಲಿಸಿಯೇ ವರದಿಯನ್ನು UUCMS ನಲ್ಲಿ ದಾಖಲಿಸಿದೆ ಎಂದು ಮಾನ್ಯ ಕುಲಪತಿಗಳು ಸಭೆಗೆ ತಿಳಿಸಿದರು. ಸಭೆಯು ಕಾಲೇಜಿನ ಸಂಯೋಜನೆಗೆ ಅನುಮೋದಿಸಿತು.** |
| **ವಿಷಯ 05** | **ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯದ 2016–17ನೇ ಸಾಲಿನ ವಿದ್ಯಾರ್ಥಿಗಳ ಫಲಿತಾಂಶ ಮತ್ತು ಅಂಕಪಟ್ಟಿಗಳನ್ನು ನೀಡುವ ಬಗೆಗೆ.** |
| ಟಿಪ್ಪಣಿ | ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯವು 2013–14ನೇ ಸಾಲಿನಿಂದ ವಿಶ್ವವಿದ್ಯಾಲಯದ ಅಧೀನದಲ್ಲಿ ಸಂಸ್ಕೃತ ಸಂಜೆ ಕಾಲೇಜನ್ನು ಪ್ರಾರಂಭಿಸಿ, ಬಿ.ಎ. ಪದವಿ ತರಗತಿಗಳನ್ನು ನಡೆಸುತ್ತಿದೆ. ಅದರಂತೆ, ಸ್ವಾಭಾವಿಕ ಬೆಳವಣಿಗೆಯ ಆಧಾರದಲ್ಲಿ, ಪ್ರಶಿಕ್ಷಣ ಪರಿಷತ್ ಮತ್ತು ಪ್ರಶಾಸನ ಸಮಿತಿಯ ಅನುಮೋದನೆಯ ಮೇರೆಗೆ, 2016–17ನೇ ಸಾಲಿನಲ್ಲಿ ಎಂ.ಎ. ಪದವಿಯನ್ನು ಪ್ರಾರಂಭಿಸಲಾಗಿದೆ. ಆದರೆ, ಎಂ.ಎ. ಪದವಿಗೆ ಪ್ರವೇಶಾತಿ ಪಡೆದ ವಿದ್ಯಾರ್ಥಿಗಳ ಪರೀಕ್ಷಾ ಫಲಿತಾಂಶಗಳನ್ನು ಪ್ರಕಟಿಸುವ ಸಂದರ್ಭದಲ್ಲಿ ಫಲಿತಾಂಶ ಪಟ್ಟಿಯಲ್ಲಿ ಪದವಿಯ ಹೆಸರು 'ಎಂ.ಎ.' ಬದಲಿಗೆ ಸಂಯೋಜಿತ ಸಂಸ್ಕೃತ ಕಾಲೇಜುಗಳಲ್ಲಿರುವಂತೆ 'ವಿದ್ವದುತ್ತಮಾ' ಎಂದು ನಮೂದಾಗಿರುತ್ತದೆ. ಹೀಗಾಗಿ, ಈ ವಿದ್ಯಾರ್ಥಿಗಳಿಗೆ ಈವರೆಗೂ ಅಂಕಪಟ್ಟಿಗಳನ್ನು ನೀಡಲೂ ಸಾಧ್ಯವಾಗಿರುವುದಿಲ್ಲ. ಆದುದರಿಂದ, 2016–17ನೇ ಸಾಲಿನ ವಿದ್ಯಾರ್ಥಿಗಳ ಫಲಿತಾಂಶವನ್ನು 'ವಿದ್ವದುತ್ತಮಾ' ಬದಲಿಗೆ 'ಎಂ.ಎ.' ಎಂದು ಪರಿಷ್ಕರಿಸಿ, ಹೊಸದಾಗಿ ಫಲಿತಾಂಶವನ್ನು ಪ್ರಕಟಿಸಲು ಹಾಗೂ ಅಂಕಪಟ್ಟಿಗಳನ್ನು ನೀಡಲು ಪ್ರಶಿಕ್ಷಣ ಪರಿಷತ್‌ನ ಅನುಮತಿಗಾಗಿ ಮಂಡಿಸಿದೆ. |

**ನಿರ್ಣಯ**

**ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯದ 2016–17ನೇ ಸಾಲಿನ ವಿದ್ಯಾರ್ಥಿಗಳ ಫಲಿತಾಂಶವನ್ನು** 'ವಿದ್ವದುತ್ತಮಾ' ಬದಲಿಗೆ 'ಎಂ.ಎ.' ಎಂದು ಪರಿಷ್ಕರಿಸಿ **ಹೊಸದಾಗಿ ಪರೀಕ್ಷಾ ಫಲಿತಾಂಶವನ್ನು ಪ್ರಕಟಿಸಲು ಮತ್ತು ಅಂಕಪಟ್ಟಿಗಳನ್ನು ನೀಡಲು ಸಭೆಯು ಅನುಮೋದಿಸಿತು.**

**ವಿಷಯ 06**

**ಶ್ರೀ ಮೇಧಾ ದಕ್ಷಿಣಮೂರ್ತಿ ವೇದಭವನ ಸಂಸ್ಕೃತ ಕಾಲೇಜು, ಗೋಕರ್ಣ –ಈ ಕಾಲೇಜಿನ 2016–17ನೇ ಸಾಲಿನ ಆಚಾರ್ಯ(ಎಂ.ಎ.) ವಿದ್ಯಾರ್ಥಿಗಳ ತಡೆಹಿಡಿಯಲಾದ ಫಲಿತಾಂಶವನ್ನು ಪ್ರಕಟಿಸುವ ಬಗೆಗೆ.**

**ಟಿಪ್ಪಣಿ**

ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯದ ಆಚಾರ್ಯ(ಎಂ.ಎ.) ಪದವಿ ಪ್ರವೇಶಾತಿಗೆ ನಿಗದಿಪಡಿಸಿರುವ ವಿದ್ಯಾರ್ಹತೆ ಪಡೆದಿರುವುದಕ್ಕೆ ಸಂಬಂಧಿಸಿದ ದಾಖಲೆಗಳನ್ನು ಸಲ್ಲಿಸದ ಹಿನ್ನೆಲೆಯಲ್ಲಿ, 2016–17ನೇ ಸಾಲಿನಲ್ಲಿ ನಡೆದ ಆಚಾರ್ಯ(ಎಂ.ಎ.) ಪ್ರಥಮ ಮತ್ತು ದ್ವಿತೀಯ ಸೆಮಿಸ್ಟರ್ ಪರೀಕ್ಷೆಗಳನ್ನು ಬರೆದ ಶ್ರೀ ಮೇಧಾ ದಕ್ಷಿಣಾಮೂರ್ತಿ ವೇದಭವನ ಸಂಸ್ಕೃತ ಕಾಲೇಜು, ಗೋಕರ್ಣ –ಈ ಕಾಲೇಜಿನ ಒಟ್ಟು 24 ವಿದ್ಯಾರ್ಥಿಗಳ ಪೈಕಿ 17 ವಿದ್ಯಾರ್ಥಿಗಳ ಫಲಿತಾಂಶವನ್ನು ತಡೆಹಿಡಿಯಲಾಗಿರುತ್ತದೆ. ಈ ಪೈಕಿ, 11 ವಿದ್ಯಾರ್ಥಿಗಳು ವೇದಶಾಸ್ತ್ರೋತ್ತೇಜಕ ಸಭಾ, ಪುಣೆ –ಈ ಸಂಸ್ಥೆಯು ನಡೆಸುವ ಕೋವಿದ ಪರೀಕ್ಷೆಯಲ್ಲಿ ಉತ್ತೀರ್ಣರಾಗಿದ್ದು, ಪ್ರಮಾಣಪತ್ರವನ್ನು ಕಾಲೇಜಿಗೆ ಸಲ್ಲಿಸಿರುತ್ತಾರೆ. ಭಾರತ ಸರ್ಕಾರದ ಶಿಕ್ಷಣ ಸಚಿವಾಲಯವು (No. F. 46-1/63-S.U., Government of India, Ministry of Education (Department of Education), New Delhi, dated the 23rd January 1964) ಕೋವಿದ ಪರೀಕ್ಷೆಯನ್ನು ಬಿ.ಎ. ಸಮಾನಾಂತರವೆಂದು ಆದೇಶಿಸಿರುತ್ತದೆ. ಅನಂತರ, ಈ ವಿದ್ಯಾರ್ಥಿಗಳು ತೃತೀಯ ಮತ್ತು ಚತುರ್ಥ ಸೆಮಿಸ್ಟರ್ ಪರೀಕ್ಷೆಗಳನ್ನು ಬರೆದಿದ್ದು, ಈ ಪರೀಕ್ಷೆಗಳ ಫಲಿತಾಂಶವನ್ನು ಪ್ರಕಟಿಸಲಾಗಿದೆ ಹಾಗೂ ಅಂಕಪಟ್ಟಿಗಳನ್ನೂ ನೀಡಲಾಗಿದೆ. ಉಳಿದ 6 ವಿದ್ಯಾರ್ಥಿಗಳು ಮಾನಿತ ವಿದ್ಯಾರ್ಹತೆ ಹೊಂದಿರುವುದಕ್ಕೆ ಯಾವುದೇ ದಾಖಲೆಗಳನ್ನು ನೀಡಿರುವುದಿಲ್ಲ ಹಾಗೂ ಈ 6 ವಿದ್ಯಾರ್ಥಿಗಳ ಪ್ರವೇಶಾತಿಯನ್ನು ರದ್ದುಗೊಳಿಸಲಾಗಿರುತ್ತದೆ. ಈ ಹಿನ್ನೆಲೆಯಲ್ಲಿ, ಕೆಳಕಂಡ ಒಟ್ಟು 11 ವಿದ್ಯಾರ್ಥಿಗಳ ಆಚಾರ್ಯ(ಎಂ.ಎ.) ಪ್ರಥಮ ಮತ್ತು ದ್ವಿತೀಯ ಸೆಮಿಸ್ಟರ್ ಪರೀಕ್ಷೆಗಳ ಫಲಿತಾಂಶವನ್ನು ಪ್ರಕಟಿಸಲು ಪ್ರಶಿಕ್ಷಣ ಪರಿಷತ್‌ನ ಅನುಮೋದನೆಗಾಗಿ ವಿಷಯವನ್ನು ಮಂಡಿಸಿದೆ.

| Sl. No. | Registration No. | Name of the Student | Name of the Father | Discipline |
|---|---|---|---|---|
| 01 | ASMP01160322 | DINESH PEDGAONKAR | KIRAN RAO PEDGAONKAR | SAMAVEDA TANDYA MAHABRAHMANA |
| 02 | AKYP01160327 | MAHABALESHWAR SUBRAHMANYA SHANKARALING | SUBRAHMANYA SHANKARALING | KRISHNAYAJURVEDA |
| 03 | ARVP01160328 | MANDAR SADHALE | CHANDRASHEKHAR SADHALE | RIGVEDA GHANANTA |
| 04 | AKYP01160329 | NAGARAJA GAYATRI | JAYARAM GAYATRI | KRISHNAYAJURVEDA |
| 05 | ARVP01160331 | NEELAKANTH JOGALEKAR | VASUDEV JOGALEKAR | RIGVEDA GHANANTA |
| 06 | ARVP01160334 | PRATHAMESH JOSHI | RATNAKAR JOSHI | RIGVEDA GHANANTA |
| 07 | ARVP01160338 | SACHIN UDAY KULKARNI | UDAY KULKARNI | RIGVEDA GHANANTA |
| 08 | ARVP01160340 | SHIVARAM K JOGALEKAR | KESHAV JOGALEKAR | RIGVEDA SMARTA PRAYOGA |
| 09 | ARVP01160341 | SOMANATH JOGALEKAR | VASUDEV JOGALEKAR | RIGVEDA GHANANTA |
| 10 | ARVP01160343 | UDAY GANAPATI MAYYAR | GANAPATI | RIGVEDA GHANANTA |
| 11 | AKYP01160344 | YADAVESHA SHARMA | K. GANAPATI BHAT | KRISHNAYAJURVEDA |

**ನಿರ್ಣಯ**

**ಶ್ರೀ ಮೇಧಾ ದಕ್ಷಿಣಮೂರ್ತಿ ವೇದಭವನ ಸಂಸ್ಕೃತ ಕಾಲೇಜು, ಗೋಕರ್ಣ –ಈ ಕಾಲೇಜಿನ 2016–17ನೇ ಸಾಲಿನ ಆಚಾರ್ಯ(ಎಂ.ಎ.) ವಿದ್ಯಾರ್ಥಿಗಳ ಮಾನಿತ ವಿದ್ಯಾರ್ಹತೆ ಹೊಂದಿರುವ ಪ್ರಮಾಣಪತ್ರಗಳನ್ನು ಮೌಲ್ಯಮಾಪನ ಕುಲಸಚಿವರು ಪರಿಶೀಲಿಸಿ, ತಡೆಹಿಡಿಯಲಾದ ಅರ್ಹ ವಿದ್ಯಾರ್ಥಿಗಳ ಫಲಿತಾಂಶವನ್ನು ಪ್ರಕಟಿಸಲು ಸಭೆಯು ಅನುಮೋದಿಸಿತು.**

**ವಿಷಯ 07**

**ವಿದ್ಯಾವಾರಿಧಿ(ಪಿಎಚ್.ಡಿ.) ಪದವಿ ಸಂಶೋಧನಾ ವಿದ್ಯಾರ್ಥಿಗಳು ಶೋಧಸಾರದ 'ಪ್ರದರ್ಶನ ಪತ್ರ'ವನ್ನು ಸಲ್ಲಿಸುವ ಬಗೆಗೆ.**

| | |
|---|---|
| ಟಿಪ್ಪಣಿ | ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯದ ವಿದ್ಯಾವಾರಿಧಿ(ಪಿಎಚ್.ಡಿ.) ಪದವಿ ಸಂಶೋಧನಾ ವಿದ್ಯಾರ್ಥಿಗಳು ವಿಶ್ವವಿದ್ಯಾಲಯಕ್ಕೆ ಅಂತಿಮ ಶೋಧಪ್ರಬಂಧವನ್ನು ಸಲ್ಲಿಸುವ ಸಂದರ್ಭದಲ್ಲಿ ಈ ಕೆಳಕಂಡ ಮಾಹಿತಿಗಳನ್ನೊಳಗೊಂಡ ಶೋಧಸಾರದ ಪ್ರದರ್ಶನ ಪತ್ರವನ್ನು ಪಡೆಯಲಾಗುತ್ತಿದೆ.<br>• ಶೋಧಸಾರದ ಪ್ರದರ್ಶನ ಪತ್ರವು ಇಂಗ್ಲಿಷ್ ಭಾಷೆಯಲ್ಲಿರಬೇಕು.<br>• ಪತ್ರದ ಮೇಲ್ಭಾಗದಲ್ಲಿ ವಿಶ್ವವಿದ್ಯಾಲಯದ ಲಾಂಛನ (Logo) ಇರಬೇಕು.<br>• ಲೋಗೋ ಕೆಳಗೆ ಇಂಗ್ಲಿಷ್‌ನಲ್ಲಿ KARNATAKA SAMSKRITA VISHWAVIDYALAYA Pampa Mahakavi Road, Chamarajpet, Bengaluru – 560018. ಎಂದಿರಬೇಕು.<br>• ಅನಂತರ ಸಂಸ್ಕೃತ ಅಥವಾ ಇಂಗ್ಲಿಷ್ Capital Letterನಲ್ಲಿ ಶೋಧಪ್ರಬಂಧದ ಶೀರ್ಷಿಕೆ ಇರಬೇಕು.<br>• ಅನಂತರ objective ಬರೆಯಬೇಕು. Font size: 16, Times New Roman font ಇರಬೇಕು<br>• ಅನಂತರ Methodology ಬರೆದಿರಬೇಕು.<br>• ಅನಂತರ research outcome ಇರಬೇಕು.<br>• ಕೊನೆಯಲ್ಲಿ ಎಡಭಾಗದಲ್ಲಿ ಮಾರ್ಗದರ್ಶಕರ ಹೆಸರು ಮತ್ತು ಬಲಭಾಗದಲ್ಲಿ ಶೋಧವಿದ್ಯಾರ್ಥಿಯ ಹೆಸರು ಇರಬೇಕು, ಶೋಧವಿದ್ಯಾರ್ಥಿಯ ಹೆಸರಿನ ಕೆಳಗೆ Reg No. ಮತ್ತು ಅದರ ಕೆಳಗೆ Date of submission ಇರಬೇಕು.<br>• 300 GSM ಇರುವ ಪತ್ರದಲ್ಲಿ A3 size ನಲ್ಲಿ ಮುದ್ರಿಸಿ Lamination ಮಾಡಿರಬೇಕು.<br>• Multi color ನಲ್ಲಿರಬೇಕು. (Digital colour print–poster format)<br>• ಶೋಧಪ್ರಬಂಧಕ್ಕೆ ಸಂಬಂಧಿಸಿದ/ ಶೋಧ ಪ್ರಬಂಧದ ವಿಷಯವನ್ನು ಸುಲಭವಾಗಿ ತಿಳಿಸಿಕೊಡಲು ಅನುಕೂಲವಾಗುವ ಅಗತ್ಯ ಚಿತ್ರಗಳನ್ನು/ diagramಗಳನ್ನು ಉಪಯೋಗಿಸಬಹುದು.<br>• ಅತ್ಯಂತ ಆಕರ್ಷಣೀಯವಾದ ಬಿತ್ತಿಪತ್ರವಾಗಿರಬೇಕು.<br>**ಉದ್ದೇಶ: ಸಮಗ್ರ ಶೋಧಪ್ರಬಂಧದಲ್ಲಿ ಯಾವ ಹೊಸ ಅಂಶ ಬೆಳಕಿಗೆ ಬಂದಿದೆ ಎಂಬುದನ್ನು ಸಮಾಜಕ್ಕೆ ಸುಲಭವಾಗಿ ತಿಳಿಸುವುದು.** ಈ ವಿಷಯವನ್ನು ಪ್ರಶಿಕ್ಷಣ ಪರಿಷತ್ತಿನ ಅನುಮೋದನೆಗಾಗಿ ಮಂಡಿಸಿದೆ. |
| ನಿರ್ಣಯ | **ವಿದ್ಯಾವಾರಿಧಿ(ಪಿಎಚ್.ಡಿ.) ಪದವಿ ಸಂಶೋಧನಾ ವಿದ್ಯಾರ್ಥಿಗಳು ಶೋಧಸಾರದ 'ಪ್ರದರ್ಶನ ಪತ್ರ'ವನ್ನು** ಸಲ್ಲಿಸುವ ಬಗ್ಗೆ ಎಲ್ಲಾ ಸದಸ್ಯರು ಈ ವಿಷಯವನ್ನು ಶ್ಲಾಘಿಸಿ ಅನುಮೋದಿಸಿದರು. ಮುಂದುವರಿದು, ಸಂಶೋಧನರಯ ಫಲಿತಾಂಶವನ್ನು ಸಮಾಜಕ್ಕೆ ಸುಲಭವಾಗಿ ತಲುಪಿಸುವ ದೃಷ್ಟಿಯಿಂದ ಅಂತಿಮ ಶೋಧಸಾರವನ್ನು (Final Synopsis) ಸಂಸ್ಕೃತದ ಜೊತೆಗೆ ಇಂಗ್ಲೀಷ್ ಭಾಷೆಯಲ್ಲಿಯೂ ಸಹ ಸಲ್ಲಿಸಲು ವಿದ್ಯಾರ್ಥಿಗಳಿಗೆ ಸೂಚಿಸಬೇಕು. ಇಂಗ್ಲೀಷ್ ಶೋಧಸಾರವು ಅತ್ಯಂತ ಸಂಕ್ಷಿಪ್ತವಾಗಿದ್ದು, ಬಿಂದುರೂಪದಲ್ಲಿರಬೇಕು ಎಂದು ತೀರ್ಮಾನಿಸಲಾಯಿತು. |
| **ವಿಷಯ 08** | **ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯದಿಂದ ನಡೆಸುವ ಪರೀಕ್ಷೆಗಳಲ್ಲಿ ಪಡೆದ ಅಂಕಗಳನ್ನಾಧರಿಸಿ ಶ್ರೇಣಿಗಳನ್ನು ನೀಡುವ ಕುರಿತು.** |
| ಟಿಪ್ಪಣಿ | ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯದಿಂದ ನಡೆಸುವ ಪರೀಕ್ಷೆಗಳಲ್ಲಿ ಪಡೆದ ಅಂಕಗಳನ್ನಾಧರಿಸಿ ಶ್ರೇಣಿಗಳನ್ನು ನೀಡುತ್ತಿದ್ದು UUCMS ನಲ್ಲಿ ಶ್ರೇಣಿಗಳನ್ನು ಹಾಗೂ SGPA ಮತ್ತು CGPA ನಿಗದಿಪಡಿಸಬೇಕಾಗಿದ್ದು ದಿನಾಂಕ 07.12.2022ರಂದು ಯು.ಜಿ.ಸಿಯ Curriculum and Credit Framework for Undergraduate Programmes ನ ಅನ್ವಯ ಸ್ನಾತಕ ಹಾಗೂ ದಿನಾಂಕ 14.06.2024ರ ಯು.ಜಿ.ಸಿ.ಯ Curriculum and Credit Framework for Postgraduate Programmes ನ ಅನ್ವಯ ಸ್ನಾತಕೋತ್ತರ ವಿಭಾಗದ SGPA ಹಾಗೂ CGPA ಹಾಗೂ Letter grade ಮತ್ತು Grade point ಗಳನ್ನು ಹಾಗೂ ಶ್ರೇಣಿಗಳನ್ನು ಈ ಕೆಳಗಿನಂತೆ ನಿಗದಿಪಡಿಸಬಹುದಾಗಿದೆ. ಹಾಗೂ ತೇರ್ಗಡೆಯೆಂದು ಘೋಷಿಸಲು ಆಂತರಿಕ ಮತ್ತು ಲೇಖನ ಪರೀಕ್ಷೆಗಳಲ್ಲಿ ಪ್ರತ್ಯೇಕವಾಗಿ ಹಾಗೂ ಒಟ್ಟಾರೆಯಾಗಿಯೂ ಶೇ.40 ರಷ್ಟು ಅಂಕಗಳನ್ನು ಹೊಂದಿರಬೇಕು.<br>**EXAM GRADING PATTERN** |

| Sl. No. | Grade point | Percentage Interval Min | Percentage Interval Max | Letter Grade | Classification |
|---|---|---|---|---|---|
| 1 | O (Outstanding) | 90.00 | 100.00 | 10 | Distinction |
| 2 | A+ (Excellent) | 80.00 | 89.99 | 9 | |
| 3 | A (Very Good) | 75.00 | 79.99 | 8 | |
| 4 | B+ (Good) | 60.00 | 74.99 | 7 | First class |
| 5 | B(Above Average) | 50.00 | 59.99 | 6 | Second class |
| 6 | C (Average) | 45.00 | 49.99 | 5 | Pass class |
| 7 | P (Pass) | 40.00 | 44.99 | 4 | |
| 8 | F (Fail) | 0 | 39.99 | 0 | Fail |
| 9 | Ab (Absent) | | | 0 | Absent |

ಯಾವುದೇ ಪತ್ರಿಕೆಗೆ ಗೈರುಹಾಜರಿ ಆಗಿ ಅಥವಾ ಅನುತ್ತೀರ್ಣಗೊಂಡು ಪುನರಾವರ್ತಿತರಾಗಿ ತೇರ್ಗಡೆ ಹೊಂದಿದ್ದಲ್ಲಿ Pass class ಎಂದು ಪರಿಗಣಿಸಲಾಗುವುದು. ಈ ಬಗ್ಗೆ ಪ್ರಶಿಕ್ಷಣ ಪರಿಷತ್ತಿನ ನಿರ್ಣಯಕ್ಕಾಗಿ ಮಂಡಿಸಿದೆ.

| | |
|---|---|
| ನಿರ್ಣಯ | **ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯದಿಂದ ನಡೆಸುವ ಪರೀಕ್ಷೆಗಳ ಫಲಿತಾಂಶದಲ್ಲಿ ವಿಶ್ವವಿದ್ಯಾಲಯ ಅನುದಾನ ಆಯೋಗ(ಯುಜಿಸಿ) ಹಾಗೂ ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯದ ಪರೀಕ್ಷಾ ಕೈಪಿಡಿಯ ಮಾನದಂಡವನ್ನು ಅನುಸರಿಸಿ ಶ್ರೇಣಿಗಳನ್ನು ಘೋಷಿಸಲು ಹಾಗೂ ಯಾವುದೇ ಪತ್ರಿಕೆಗೆ ಗೈರುಹಾಜರಾಗಿ ಅಥವಾ ಅನುತ್ತೀರ್ಣಗೊಂಡು ಪುನರಾವರ್ತಿತರಾಗಿ ತೇರ್ಗಡೆ ಹೊಂದಿದ್ದಲ್ಲಿ Pass class ಎಂದು ಫಲಿತಾಂಶ ನೀಡಲು ಸಭೆಯು ಅನುಮೋದಿಸಿತು.** |
| **ವಿಷಯ 09** | **ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯದಲ್ಲಿ ರಾಜ್ಯ ಶಿಕ್ಷಣ ನೀತಿಯನ್ನು ಅಳವಡಿಸಿಕೊಳ್ಳುವ ಮತ್ತು ಪಠ್ಯಕ್ರಮದ ಕುರಿತು.** |
| ಟಿಪ್ಪಣಿ | ಸರ್ಕಾರದ ಆದೇಶ ಸಂಖ್ಯೆ: ಇಡಿ 166 ಯುಎನ್ಇ 2023; ದಿನಾಂಕ: 08.05.2024ರ ಮಾರ್ಗಸೂಚಿಸಯಂತೆ ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯವು 2023–24ನೇ ಸಾಲಿನಿಂದ ಪದವಿ ಕಾರ್ಯಕ್ರಮಗಳ ಅವಧಿ ಹಾಗೂ ಪಠ್ಯಕ್ರಮವನ್ನು, ಇತರ ನಿಯಮಾವಳಿಗಳನ್ನು ಅನುಷ್ಠಾನಗೊಳಿಸಬೇಕಾಗಿದ್ದು ಪ್ರಶಿಕ್ಷಣ ಪರಿಷತ್ತಿನ ನಿರ್ಣಯಕ್ಕಾಗಿ ವಿಷಯವನ್ನು ಮಂಡಿಸಿದೆ.<br>ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯದಲ್ಲಿ ಬಿಎಸ್.ಸಿ. ಯೋಗಿಕ್ ಸೈನ್ಸ್ ಅಂಡ್ ಸಮಾಲೋಚನಾ ಕೋರ್ಸಿನ ಪಠ್ಯ ಮತ್ತು ಬಿ.ಎ. ಕೋರ್ಸಿನ ಇತಿಹಾಸ ಮತ್ತು ಸೈಕಾಲಜಿ ವಿಷಯದ ಪಠ್ಯಕ್ರಮವನ್ನು ರಾಜ್ಯ ಶಿಕ್ಷಣ ನೀತಿ – 2024 ರಂತೆ ಸಿದ್ಧಪಡಿಸಿ, ಅಧ್ಯಯನ ಮಂಡಳಿಯ ಅನುಮೋದನೆ ಪಡೆಯಲಾಗಿದ್ದು, 2024ನೇ ಸಾಲಿನಿಂದ ಸದರಿ ಪಾಠ್ಯಕ್ರಮವನ್ನು ಅನುಷ್ಠಾನಗೊಳಿಸಲು ಅಭೆಯ ಅನುಮೋದನೆಗೆ ಮಂಡಿಸಿದೆ. |
| ನಿರ್ಣಯ | 2024–25ನೇ ಸಾಲಿನಿಂದ ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯದಲ್ಲಿ ಮತ್ತು ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯದ ಸಂಯೋಜಿತ ಕಾಲೇಜುಗಳಲ್ಲಿ ರಾಜ್ಯ ಶಿಕ್ಷಣ ನೀತಿಯನ್ನು ಅಳವಡಿಸಿಕೊಳ್ಳಲು ಸಭೆಯು ಅನುಮೋದಿಸಿತು ಹಾಗೂ ರಾಜ್ಯ ಶಿಕ್ಷಣ ನೀತಿ – 2024 ರಂತೆ ಸಿದ್ಧಪಡಿಸಿದ ಬಿಎಸ್. ಸಿ. ಯೋಗಿಕ್ ಸೈನ್ಸ್ ಅಂಡ್ ಸಮಾಲೋಚನಾ ಕೋರ್ಸಿನ ಪಠ್ಯ, ಬಿ.ಎ. ಕೋರ್ಸಿನ ಇತಿಹಾಸ ಮತ್ತು ಸೈಕಾಲಜಿ ವಿಷಯದ ಪಠ್ಯಕ್ರಮವನ್ನು 2024ನೇ ಸಾಲಿನಿಂದ ಅನುಷ್ಠಾನಗೊಳಿಸಲು ಅಭೆಯ ಅನುಮೋದಿಸಿತು. |
| **ವಿಷಯ 10** | **ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯದ ಪ್ರಾರ್ಥನಾಶ್ಲೋಕವನ್ನು ನಿರ್ಣಯಿಸುವ ಬಗೆಗೆ.** |
| ಟಿಪ್ಪಣಿ | ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯವು ವಿವಿ ಪ್ರಾರ್ಥನಾ ಶ್ಲೋಕವಾಗಿ ಉತ್ತಮವಾದ ಶ್ಲೋಕವನ್ನು ರಚನೆ ಮಾಡುವಂತೆ ಉಡುಪಿಯಲ್ಲಿರುವ ಎಸ್.ಎಂ.ಎಸ್.ಪಿ. ಸಂಸ್ಕೃತಮಹಾವಿದ್ಯಾಲಯದ ಅಲಂಕಾರ ಶಾಸ್ತ್ರದ ಸಹಾಯಕ ಪ್ರಾಧ್ಯಾಪಕರಾದ ಡಾ. ಮಹೇಶ ಭಟ್ ಆರ್. ಹಾರ್ಯಾಡಿ ಇವರನ್ನು ಕೋರಿತ್ತು. ಅದರಂತೆ ಇವರು ಈ ಕೆಳಗಿನ ಶ್ಲೋಕವನ್ನು ರಚನೆ ಮಾಡಿ ನೀಡಿರುತ್ತಾರೆ.<br>**ಕಲ್ಯಾಣಿ ವೀಣಾರಮಣೀಯಪಾಣೇ**<br>**ಸಂಸ್ಕಾರದೇ ಪಾಲಯ ಶಾರದೇ ಮಾಮ್** |

| | |
|---|---|
| | **ವಿಶ್ವೇ ತವ ಸ್ನೇಹಮವಾಪ್ಯ ಧೀರೈಃ**<br>**ಪ್ರಜ್ವಾಲಿತೋ ಜ್ಞಾನಮಯಃ ಪ್ರದೀಪಃ ॥**<br>ಈ ಶ್ಲೋಕದ ಮೊದಲ ಮೂರು ಪಾದದ ಮೊದಲನೆಯ ಅಕ್ಷರಗಳನ್ನು ಸೇರಿಸಿದಾಗ ಕಸಂವಿ ಎಂದಾಗುವುದು ಹಾಗೂ ಕೊನೆಯ ವಾಕ್ಯವು ವಿಶ್ವವಿದ್ಯಾಲಯದ ಧ್ಯೇಯವಾಕ್ಯವಾಗಿದೆ. ಹೀಗೆ ವಿಶಿಷ್ಟವಾದ ಶಾರದೆಯ ಸ್ತುತಿಯನ್ನು ವಿಶ್ವವಿದ್ಯಾಲಯದ ಪ್ರಾರ್ಥನಾಶ್ಲೋಕವಾಗಿ ನಿರ್ಣಯಿಸಬಹುದಾಗಿದ್ದು ಪ್ರಶಿಕ್ಷಣ ಪರಿಷತ್ತಿನ ಅನುಮೋದನೆಗಾಗಿ ಸಲ್ಲಿಸಿದೆ. |
| ನಿರ್ಣಯ | **ಕಲ್ಯಾಣಿ ವೀಣಾರಮಣೀಯಪಾಣೇ**<br>**ಸಂಸ್ಕಾರದೇ ಪಾಲಯ ಶಾರದೇ ಮಾಮ್**<br>**ವಿಶ್ವೇ ತವ ಸ್ನೇಹಮವಾಪ್ಯ ಧೀರೈಃ**<br>**ಪ್ರಜ್ವಾಲಿತೋ ಜ್ಞಾನಮಯಃ ಪ್ರದೀಪಃ ॥**<br>ಎಂಬ ಪ್ರಾರ್ಥನಾ ಶ್ಲೋಕವನ್ನು ಸಭೆಯು ಅನುಮೋದಿಸಿತು ಹಾಗೂ ಎಸ್.ಎಂ.ಎಸ್.ಪಿ. ಸಂಸ್ಕೃತ ಮಹಾವಿದ್ಯಾಲಯದ ಅಲಂಕಾರ ಶಾಸ್ತ್ರದ ಸಹಾಯಕ ಪ್ರಾಧ್ಯಾಪಕರಾದ ಡಾ. ಮಹೇಶ ಭಟ್ ಆರ್. ಹಾರ್ಯಾಡಿ ಇವರಿಗೆ ಪತ್ರಿಸಿ ಅವರ ಅನುಮತಿ ಪಡೆದು ಈ ಶ್ಲೋಕವನ್ನು ಅಧಿಕೃತವಾಗಿ ಬಳಸಲು ಸಭೆಯು ಸೂಚಿಸಿತು. |
| **ವಿಷಯ 11** | **ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯದ Tagline ಅನ್ನು ನಿರ್ಣಯಿಸುವ ಬಗೆಗೆ.** |
| ಟಿಪ್ಪಣಿ | ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯವು ಸಂಸ್ಕೃತದ ಅಧ್ಯಾಪನ, ಸಂಶೋಧನೆಗಾಗಿ ಉದಯಿಸಿರುವ ವಿಶ್ವವಿದ್ಯಾಲಯವಾಗಿರುವುದರಿಂದ ಸಂಸ್ಕೃತದ ಮಹತ್ವವನ್ನು ಸಾರುವ ವಾಕ್ಯವನ್ನು ವಿಶ್ವವಿದ್ಯಾಲಯದ Tagline ಆಗಿ ಉಪಯೋಗಿಸಬಹುದಾಗಿದ್ದು ಈ ಹಿನ್ನೆಲೆಯಲ್ಲಿ **"ಸಂಸ್ಕೃತಂ ನ ಕೇವಲಂ ಭಾಷಾ ಅಪಿ ಚ ಜೀವೋತ್ಕರ್ಷಿಣೀ"** ಎಂಬ ವಾಕ್ಯವನ್ನು ವಿಶ್ವವಿದ್ಯಾಲಯದ Tagline ಆಗಿ ಬಳಸಲು ಪ್ರಶಿಕ್ಷಣ ಪರಿಷತ್ತಿನ ಅನುಮೋದನೆಗಾಗಿ ಸಲ್ಲಿಸಿದೆ. |
| ನಿರ್ಣಯ | **"ಸಂಸ್ಕೃತಂ ನ ಕೇವಲಂ ಭಾಷಾ ಅಪಿ ಚ ಜೀವೋತ್ಕರ್ಷಿಣೀ" ಎಂಬ ವಾಕ್ಯವನ್ನು ವಿಶ್ವವಿದ್ಯಾಲಯದ Tagline ಆಗಿ ಬಳಸಲು ಸಭೆಯು ಅನುಮೋದಿಸಿತು.** |
| **ವಿಷಯ 12** | **2024-25 ರಿಂದ 2026-27ನೇ ಸಾಲಿನವರೆಗಿನ ಪರೀಕ್ಷಾ ಮಂಡಳಿ (Board of Examiners) ಯನ್ನು ರಚಿಸುವ ಬಗೆಗೆ.** |
| ಟಿಪ್ಪಣಿ | ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯದಲ್ಲಿ ಪರೀಕ್ಷಾ ಪ್ರಕ್ರಿಯೆಗಳನ್ನು ಕೈಗೊಳ್ಳಲು 2024-25ನೇ ಸಾಲಿನಿಂದ 2026-27ನೇ ಸಾಲಿನವರೆಗೆ (ಮೂರು ವರ್ಷಗಳ ಅವಧಿಗೆ) ಆಯಾ ಶಾಸ್ತ್ರವಾರು ಹಾಗೂ ವೇದಗಳಿಗೆ ಸಂಬಂಧಪಟ್ಟಂತೆ ವಿದ್ವಾಂಸರನ್ನೊಳಗೊಂಡ ಪರೀಕ್ಷಾ ಮಂಡಳಿ (Board of Examiners) ಯನ್ನು ರಚಿಸಬೇಕಾಗಿದ್ದು, ವಿದ್ವಾಂಸರ ಪಟ್ಟಿಯನ್ನು ಪ್ರಶಿಕ್ಷಣ ಪರಿಷತ್ತಿನ ಅನುಮೋದನೆಗಾಗಿ ಮಂಡಿಸಿದೆ. |
| ನಿರ್ಣಯ | **2024-25 ರಿಂದ 2026-27ನೇ ಸಾಲಿನವರೆಗಿನ ಪರೀಕ್ಷಾ ಮಂಡಳಿ (Board of Examiners) ಯನ್ನು ಸಭೆಯು ಅನುಮೋದಿಸಿತು.** |
| **ವಿಷಯ 13** | **2024-25ನೇ ಸಾಲಿನ ಶೈಕ್ಷಣಿಕ ವರ್ಷದಲ್ಲಿ ಸಂಸ್ಕೃತ ಸಂಜೆ ಕಾಲೇಜಿನಲ್ಲಿ 'ಸಾಹಿತ್ಯ ಮತ್ತು' ದರ್ಶನ ಎಂ. ಎ. ತರಗತಿಗಳನ್ನು ಪ್ರಾರಂಭಿಸುವ ಬಗೆಗೆ.** |
| ಟಿಪ್ಪಣಿ | ವಿಶ್ವವಿದ್ಯಾಲಯದಲ್ಲಿ ಈಗಾಗಲೇ ಸಂಜೆ ಕಾಲೇಜಿನಲ್ಲಿ 2021ನೇ ಸಾಲಿನಿಂದ ಬಿ. ಎ. ತರಗತಿಗಳನ್ನು ಪುನಾರಂಭಿಸಿದ್ದು, ಆ ಸಾಲಿನ ವಿದ್ಯಾರ್ಥಿಗಳು ಕೋರ್ಸ್‌ನ್ನು ಪೂರ್ಣಗೊಳಿಸಿರುತ್ತಾರೆ. 2024-25ನೇ ಸಾಲಿನ ಶೈಕ್ಷಣಿಕ ವರ್ಷದಲ್ಲಿ ಸಂಸ್ಕೃತ ಸಂಜೆ ಕಾಲೇಜಿನಲ್ಲಿ ಎಂ.ಎ. ತರಗತಿಗಳನ್ನು ಪ್ರಾರಂಭಿಸಬಹುದಾಗಿದೆ. ಸಂಜೆ ಕಾಲೇಜಿನಲ್ಲಿ ಎಂ.ಎ. ತರಗತಿಗಳನ್ನು ಪ್ರಾರಂಭಿಸಲು ಹಲವು ಆವೇದನೆಗಳೂ ಬಂದಿರುತ್ತವೆ. ಆದ್ದರಿಂದ ಸದರಿ ವರ್ಷದಲ್ಲಿ **"ಸಾಹಿತ್ಯ ಮತ್ತು ದರ್ಶನ"** ಎಂಬ ವಿಷಯದಲ್ಲಿ ಎಂ.ಎ. ತರಗತಿಗಳನ್ನು ಪ್ರಾರಂಭಿಸಲು ಅನುಮೋದನೆಗಾಗಿ ವಿಷಯವನ್ನು ಮಂಡಿಸಿದೆ. |
| ನಿರ್ಣಯ | **2024-25ನೇ ಸಾಲಿನ ಶೈಕ್ಷಣಿಕ ವರ್ಷದಲ್ಲಿ ಸಂಸ್ಕೃತ ಸಂಜೆ ಕಾಲೇಜಿನಲ್ಲಿ 'ಸಾಹಿತ್ಯ ಮತ್ತು ದರ್ಶನ' ಎಂ.ಎ. ತರಗತಿಗಳನ್ನು ಪ್ರಾರಂಭಿಸುವ ಬಗ್ಗೆ ವಿದ್ಯಾರ್ಥಿಗಳಿಂದ ಬೇಡಿಕೆ, ಪಾಠ್ಯಕ್ರಮ, ಅಧ್ಯಯನ ಮಂಡಳಿಯ ಸಭೆ ಮೊದಲಾದ ಪ್ರಕ್ರಿಯೆಗಳನ್ನು ಪೂರೈಸಿ** |

| | |
|---|---|
| | ನಂತರ ಈ ವಿಷಯವನ್ನು ಮಂಡಿಸಬಹುದು ಎಂದು ಪ್ರೊ. ಸಿ. ಪಾಲಯ್ಯ ಅವರು ಅಭಿಪ್ರಾಯಿಸಿದರು. ಪ್ರೊ. ವಿ. ಗಿರೀಶಚಂದ್ರ ಅವರು 'ಸಾಹಿತ್ಯ ಮತ್ತು ದರ್ಶನ' ಎಂಬ ಶೀರ್ಷಿಕೆಯು ಸಮಂಜಸವಲ್ಲ. ಈ ಬಗ್ಗೆ ಸಂಬಂಧಿಸಿದ ವಿಭಾಗದ ಸಭೆ ನಡೆಸಿ ಕ್ರಮ ವಹಿಸಬೇಕೆಂದು ಅಭಿಪ್ರಾಯಿಸಿದರು. ಆದ್ದರಿಂದ, ಅಧ್ಯಯನಾಂದ ನಿರ್ದೇಶಕರು ಈ ಬಗ್ಗೆ ಕ್ರಮವಹಿಸಿ, ಅಧ್ಯಯನ ಮಂಡಳಿಯು ಪಾಠ್ಯಕ್ರಮ ಸಿದ್ಧಪಡಿಸಿ, ದಿನಾಂಕ: 25.08.2024ರೊಳಗೆ ಕುಲಸಚಿವರಿಗೆ ದಾಖಲೆ ಸಲ್ಲಿಸಿದಲ್ಲಿ ಅನುಮತಿ ನೀಡಬಹುದೆಂದು ಸಭೆಯು ತೀರ್ಮಾನಿಸಿತು. |
| ವಿಷಯ 14 | **ಮಹಾರಾಜ ಸರ್ಕಾರಿ ಸಂಸ್ಕೃತ ಕಾಲೇಜು, ಮೈಸೂರು ಇಲ್ಲಿ ವಿವಿಧ ಪದವಿ/ಸ್ನಾತಕೋತ್ತರ ಪದವಿ ಕೋರ್ಸ್‌ಗಳನ್ನು ಪ್ರಾರಂಭಿಸಲು ಅನುಮತಿ ನೀಡುವ ಬಗ್ಗೆ.** |

**ಟಿಪ್ಪಣಿ**

ಪ್ರಾಚಾರ್ಯರು, ಮಹಾರಾಜ ಸರ್ಕಾರಿ ಸಂಸ್ಕೃತ ಕಾಲೇಜು, ಮೈಸೂರು ಇವರು ದಿ: 05.03.2024ರ ಪತ್ರದಲ್ಲಿ "ಬಹಳ ಪ್ರಾಚೀನವಾದ ಮಹಾರಾಜ ಸಂಸ್ಕೃತ ಕಾಲೇಜಿನಲ್ಲಿ ಧಾರ್ಮಿಕ ದತ್ತಿ ಇಲಾಖೆಗೆ ಸೇರಿದ ಆಗಮ ವಿಭಾಗವೂ ಸಹ ಇದ್ದು, ಇದರಲ್ಲಿ ಶೈವಾಗಮ, ವೈಖಾನಸಾಗಮ, ಪಾಂಚರಾತ್ರಾಗಮ, ತಂತ್ರಸಾರಾಗಮ, ವೀರಶೈವಾಗಮ, ಜೈನಾಗಮಗಳಲ್ಲಿ ಪ್ರವರ /ಪ್ರವೀಣ ಎಂಬ ಎರಡು ಹಂತಗಳಿರುತ್ತವೆ. ಈ ಕೋರ್ಸ್‌ಗಳಿಗೆ ಸಂಬಂಧಿಸಿದ ಪ್ರಸಿದ್ಧ ಪರೀಕ್ಷೆಗಳನ್ನು ಕರ್ನಾಟಕ ಸರ್ಕಾರದ ಧಾರ್ಮಿಕ ದತ್ತಿ ಇಲಾಖೆಯು ನಡೆಸಿ ಉತ್ತೀರ್ಣರಾದವರಿಗೆ ಅಂಕಪಟ್ಟಿ ಹಾಗೂ ಅರ್ಹತಾಪತ್ರವನ್ನು ನೀಡುತ್ತಾ ಬಂದಿರುತ್ತದೆ. ನಂತರದಲ್ಲಿ ಆಗಮ ಶಾಸ್ತ್ರಗಳ ಬಗ್ಗೆ ವಿದ್ಯಾರ್ಥಿಗಳಿಗೆ ಉನ್ನತ ಶಿಕ್ಷಣದ ಅವಶ್ಯಕತೆಯಿದೆ. ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯವು ಈಗಾಗಲೇ ನಡೆಸುತ್ತಿರುವ ಹಲವಾರು ಕೋರ್ಸ್‌ಗಳ ಜೊತೆಯಲ್ಲಿ ಆಗಮ ಶಾಸ್ತ್ರಗಳ ವಿದ್ವತ್/ಬಿ.ಎ./ಶಾಸ್ತ್ರಿ ಮತ್ತು ಆಚಾರ್ಯ/ಎಂ.ಎ. ತರಗತಿಗಳನ್ನು ಪ್ರಾರಂಭಿಸಿದಲ್ಲಿ ಹೆಚ್ಚಿನ ವಿದ್ಯಾರ್ಥಿಗಳಿಗೆ ಅನುಕೂಲವಾಗುತ್ತದೆ. ಈ ವಿಷಯಗಳನ್ನು ಬೋಧಿಸಲು ನುರಿತ ವಿದ್ವಾಂಸರನ್ನು ತಮ್ಮ ವಿಶ್ವವಿದ್ಯಾಲಯದ ವತಿಯಿಂದಲೇ ನೇಮಕ ಮಾಡಿ ಅವರಿಗೆ ನೀಡಬೇಕಾದ ವೇತನಾದಿ ಸೌಲಭ್ಯಗಳನ್ನು ಸರ್ಕಾರಕ್ಕೆ ಹೊರೆಯಾಗದಂತೆ ತಾವೇ ಭರಿಸಬಹುದಾಗಿದೆ" ಎಂದು ಕೋರಿರುತ್ತಾರೆ.

ಸರ್ಕಾರಿ ಆದೇಶ ಸಂಖ್ಯೆ: ಇಡಿ 129 ಯುಎನ್‌ಇ 2024, ದಿ: 03.07.2024 ರಲ್ಲಿ ಈ ಕಾಲೇಜಿಗೆ ಯೋಗ ಮತ್ತು ಆಗಮ ವಿಭಾಗದಲ್ಲಿ ಬಿ.ಎ. ಕೋರ್ಸ್ ಆರಂಭಕ್ಕೆ ಅನುಮತಿ ನೀಡಲಾಗಿದ್ದು, ವಿವರ ಈ ಕೆಳಗಿನಂತಿದೆ.

| ಕ್ರ.ಸಂ | ಕೋರ್ಸ್ | ವಿಷಯ | ವಿದ್ಯಾರ್ಥಿ ಪ್ರಮಾಣ |
|---|---|---|---|
| 1 | ಬಿ.ಎಸ್‌ಸಿ. | ಯೋಗ | 20 |
| 2 | ಬಿ.ಎ. | ಶೈವಾಗಮ | 20 |
| 3 | ಬಿ.ಎ. | ವೈಖಾನಸಾಗಮ | 20 |
| 4 | ಬಿ.ಎ. | ಪಾಂಚರಾತ್ರಾಗಮ | 20 |
| 5 | ಬಿ.ಎ. | ತಂತ್ರಸಾರಾಗಮ | 20 |
| 6 | ಬಿ.ಎ. | ವಾತುಲಾದ್ಯಾಗಮ | 20 |
| 7 | ಬಿ.ಎ. | ವೀರಶೈವಾಗಮ | 20 |
| 8 | ಬಿ.ಎ. | ಜೈನಾಗಮ | 20 |

ಈ ಬಗ್ಗೆ ಸಭೆಯ ಅನುಮೋದನೆಗಾಗಿ ಮಂಡಿಸಿದೆ.

| | |
|---|---|
| ನಿರ್ಣಯ | **ಮಹಾರಾಜ ಸರ್ಕಾರಿ ಸಂಸ್ಕೃತ ಕಾಲೇಜು, ಮೈಸೂರು ಇಲ್ಲಿ ಯೋಗ ಮತ್ತು ಆಗಮ ವಿಭಾಗದಲ್ಲಿ ಬಿ.ಎ. ಕೋರ್ಸ್‌ಗಳನ್ನು ಪ್ರಾರಂಭಿಸಲು ಸಭೆಯು ಅನುಮೋದಿಸಿತು. ಹಾಗೂ ವಿಶ್ವವಿದ್ಯಾಲಯದ ಸಿಡಿಸಿ ಮತ್ತು ಅಧ್ಯಯನಾಂಗದ ನಿರ್ದೇಶಕರು ಪ್ರವೇಶಾತಿ ಮಾನದಂಡ/ನಿಯಮಾವಳಿ ಮತ್ತು ಅಗತ್ಯ ಪಾಠ್ಯಕ್ರಮವನ್ನು ಸಿದ್ಧಪಡಿಸಿ ದಿ: 20.08.204ರೊಳಗೆ ಕುಲಸಚಿವರಿಗೆ ಸಲ್ಲಿಸುವಂತೆ ಸೂಚಿಲು ತೀರ್ಮಾನಿಸಲಾಯಿತು.** |
| ವಿಷಯ 15 | **ನೂತನ ಕಾಲೇಜಿಗೆ/ಕೋರ್ಸಿಗೆ ಅನುಮತಿ/ಸಂಯೋಜನೆಯನ್ನು ನೀಡುವ ಬಗ್ಗೆ.** |

| | |
|---|---|
| ಟಿಪ್ಪಣಿ | **Valmiki College of Vedic Wisdom, Ragihalli, Anekal, Banglore** ಈ ಸಂಸ್ಥೆಯು ಪದವಿ ಕೋರ್ಸ್‌ನ್ನು ಪ್ರಾರಂಭಿಸಲು ಅನುಮತಿ ಕೋರಿದ್ದು, **UUCMS** ಮೂಲಕ ಪ್ರಸ್ತಾವನೆಯನ್ನು ಸರ್ಕಾರಕ್ಕೆ ಸಲ್ಲಿಸಿದ್ದು ಸಭೆಯ ಅನುಮೋದನೆಗಾಗಿ ಮಂಡಿಸಿದೆ.<br>ಶ್ರೀ ಗುರುಸಾರ್ವಭೌಮ ವೇದ ಸಂಸ್ಕೃತ ಕಾಲೇಜು, ಎನ್. ಎಸ್.ಆರ್. ಎಸ್. ಮಠ, ಜವಾಹರ ನಗರ, ರಾಯಚೂರು ಸಂಸ್ಥೆಯು ಸ್ನಾತಕೋತ್ತರ ಪದವಿ ಕೋರ್ಸ್‌ನ್ನು ಪ್ರಾರಂಭಿಸಲು ಅನುಮತಿ ಕೋರಿದ್ದು, **UUCMS** ಮೂಲಕ ಪ್ರಸ್ತಾವನೆಯನ್ನು ಸರ್ಕಾರಕ್ಕೆ ಸಲ್ಲಿಸಿದ್ದು ಸಭೆಯ ಅನುಮೋದನೆಗಾಗಿ ಮಂಡಿಸಿದೆ. |
| ನಿರ್ಣಯ | ಸರ್ಕಾರದ ಅನುಮತಿ ದೊರೆತ ನಂತರ **ನೂತನ ಕಾಲೇಜಿಗೆ ಸಂಯೋಜನೆಯನ್ನು/ ನೂತನ ಕೋರ್ಸಿಗೆ ಅನುಮತಿಯನ್ನು ನೀಡಲು ತೀರ್ಮಾನಿಸಲಾಯಿತು.** |
| **ವಿಷಯ 16** | **ಡಾ. ಬಿ.ಆರ್. ಅಂಬೇಡ್ಕರ್ ವಿಶ್ವವಿದ್ಯಾಲಯ, ನವದೆಹಲಿ, ಈ ಸಂಸ್ಥೆಯೊಂದಿಗೆ ಒಡಂಬಡಿಕೆ (MoU) ಮಾಡಿಕೊಂಡಿರುವುದಕ್ಕೆ ಘಟನೋತ್ತರ ಅನುಮೋದನೆ ನೀಡುವ ಬಗ್ಗೆ.** |
| **ಟಿಪ್ಪಣಿ** | ಬೋಧನೆ ಮತ್ತು ಸಂಶೋಧನೆಯ ಪರಿಣಾಮಕಾರಿತ್ವವನ್ನು ಹೆಚ್ಚಿಸುವಲ್ಲಿ ಎರಡು ಸಂಸ್ಥೆಗಳ ವಿದ್ಯಾರ್ಥಿಗಳು ಮತ್ತು ಸಂಶೋಧಕರಿಗೆ ಸಂಶೋಧನಾ ಅವಕಾಶವನ್ನು ಒದಗಿಸುವುದು ಈ ಸಹಯೋಗದ ಸಾಮಾನ್ಯ ಉದ್ದೇಶವಾಗಿದೆ; ಪರಸ್ಪರ ಆಸಕ್ತಿಗಳ ವಿಷಯಗಳ ಕುರಿತು ಸೆಮಿನಾರ್‌ಗಳು, ಸಮ್ಮೇಳನಗಳು ಮತ್ತು ಶೈಕ್ಷಣಿಕ ಕಾರ್ಯಾಗಾರಗಳನ್ನು ಜಂಟಿಯಾಗಿ ಆಯೋಜಿಸುವುದು; ಪುಸ್ತಕಗಳು, ಮೊನೊಗ್ರಾಫ್‌ಗಳು, ಸೆಮಿನಾರ್ ಮತ್ತು ಕಾರ್ಯಾಗಾರ ಸಂಪುಟಗಳು ಇತ್ಯಾದಿಗಳನ್ನು ಪ್ರಕಟಿಸುವುದು; ಸಾಮಾನ್ಯ ಜ್ಞಾನವನ್ನು ಪ್ರಸಾರ ಮಾಡುವುದು; ಸಾಮರ್ಥ್ಯ ನಿರ್ಮಾಣ ಕಾರ್ಯಕ್ರಮಗಳನ್ನು ಆಯೋಜಿಸುವುದು; ಅಧ್ಯಾಪಕರು / ಸಿಬ್ಬಂದಿ ಮತ್ತು ವಿದ್ಯಾರ್ಥಿಗಳ ವಿನಿಮಯ; ಜಂಟಿ ಸಂಶೋಧನೆ ಮತ್ತು ಪ್ರಕಟಣೆ ಚಟುವಟಿಕೆಗಳನ್ನು ನಡೆಸುವುದು; ಮತ್ತು ಶೈಕ್ಷಣಿಕ ಸಂಪನ್ಮೂಲ ಸಾಮಗ್ರಿಗಳ ವಿನಿಮಯ ಮತ್ತು ಪರಸ್ಪರ ಆಸಕ್ತಿಯ ಯಾವುದೇ ಇತರ ಯೋಜನೆಗಳು/ಚಟುವಟಿಕೆಗಳನ್ನು ನಡೆಸಲು **ಡಾ.ಬಿ.ಆರ್. ಅಂಬೇಡ್ಕರ್ ವಿಶ್ವವಿದ್ಯಾಲಯ, ನವದೆಹಲಿ,** ಈ ಸಂಸ್ಥೆಯೊಂದಿಗೆ ಒಡಂಬಡಿಕೆ (MoU) ಮಾಡಿಕೊಂಡಿದ್ದು ಸಭೆಯ ಘಟನೋತ್ತರ ಅನುಮೋದನೆಗಾಗಿ ಮಂಡಿಸಿದೆ. |
| ನಿರ್ಣಯ | **ಡಾ. ಬಿ.ಆರ್. ಅಂಬೇಡ್ಕರ್ ವಿಶ್ವವಿದ್ಯಾಲಯ, ನವದೆಹಲಿ, ಈ ಸಂಸ್ಥೆಯೊಂದಿಗೆ ಒಡಂಬಡಿಕೆ ಮಾಡಿಕೊಂಡಿರುವುದನ್ನು ಸಭೆಯು ಅನುಮೋದಿಸಿತು.** |
| **ವಿಷಯ 17** | **Mount Carmell College, Banglore ಈ ಸಂಸ್ಥೆಯೊಂದಿಗೆ ಒಡಂಬಡಿಕೆ (MoU) ಮಾಡಿಕೊಂಡಿರುವುದಕ್ಕೆ ಘಟನೋತ್ತರ ಅನುಮೋದನೆ ನೀಡುವ ಬಗ್ಗೆ.** |
| **ಟಿಪ್ಪಣಿ** | ಬೋಧನೆ ಮತ್ತು ಸಂಶೋಧನೆಯ ಪರಿಣಾಮಕಾರಿತ್ವವನ್ನು ಹೆಚ್ಚಿಸುವಲ್ಲಿ ಎರಡು ಸಂಸ್ಥೆಗಳ ವಿದ್ಯಾರ್ಥಿಗಳು ಮತ್ತು ಸಂಶೋಧಕರಿಗೆ ಸಂಶೋಧನಾ ಅವಕಾಶವನ್ನು ಒದಗಿಸುವುದು ಈ ಸಹಯೋಗದ ಸಾಮಾನ್ಯ ಉದ್ದೇಶವಾಗಿದೆ; ಪರಸ್ಪರ ಆಸಕ್ತಿಗಳ ವಿಷಯಗಳ ಕುರಿತು ಸೆಮಿನಾರ್‌ಗಳು, ಸಮ್ಮೇಳನಗಳು ಮತ್ತು ಶೈಕ್ಷಣಿಕ ಕಾರ್ಯಾಗಾರಗಳನ್ನು ಜಂಟಿಯಾಗಿ ಆಯೋಜಿಸುವುದು; ಪುಸ್ತಕಗಳು, ಮೊನೊಗ್ರಾಫ್‌ಗಳು, ಸೆಮಿನಾರ್ ಮತ್ತು ಕಾರ್ಯಾಗಾರ ಸಂಪುಟಗಳು ಇತ್ಯಾದಿಗಳನ್ನು ಪ್ರಕಟಿಸುವುದು; ಸಾಮಾನ್ಯ ಜ್ಞಾನವನ್ನು ಪ್ರಸಾರ ಮಾಡುವುದು; ಸಾಮರ್ಥ್ಯ ನಿರ್ಮಾಣ ಕಾರ್ಯಕ್ರಮಗಳನ್ನು ಆಯೋಜಿಸುವುದು; ಅಧ್ಯಾಪಕರು / ಸಿಬ್ಬಂದಿ ಮತ್ತು ವಿದ್ಯಾರ್ಥಿಗಳ ವಿನಿಮಯ; ಜಂಟಿ ಸಂಶೋಧನೆ ಮತ್ತು ಪ್ರಕಟಣೆ ಚಟುವಟಿಕೆಗಳನ್ನು ನಡೆಸುವುದು; ಮತ್ತು ಶೈಕ್ಷಣಿಕ ಸಂಪನ್ಮೂಲ ಸಾಮಗ್ರಿಗಳ ವಿನಿಮಯ ಮತ್ತು ಪರಸ್ಪರ ಆಸಕ್ತಿಯ ಯಾವುದೇ ಇತರ ಯೋಜನೆಗಳು/ಚಟುವಟಿಕೆಗಳನ್ನು ನಡೆಸಲು **ಮೌಂಟ್ ಕಾರ್ಮೆಲ್ ಕಾಲೇಜು, ಬೆಂಗಳೂರು** ಈ ಸಂಸ್ಥೆಯೊಂದಿಗೆ ಒಡಂಬಡಿಕೆ (MoU) ಮಾಡಿಕೊಂಡಿದ್ದು ಸಭೆಯ ಘಟನೋತ್ತರ ಅನುಮೋದನೆಗಾಗಿ ಮಂಡಿಸಿದೆ. |
| ನಿರ್ಣಯ | **Mount Carmell College, Banglore ಈ ಸಂಸ್ಥೆಯೊಂದಿಗೆ ಒಡಂಬಡಿಕೆ (MoU) ಮಾಡಿಕೊಂಡಿರುವುದಕ್ಕೆ ಸಭೆಯು ಅನುಮೋದಿಸಿತು.** |

| | |
|---|---|
| ವಿಷಯ 18 | **Naxxatra Sciences, Banglore ಈ ಸಂಸ್ಥೆಯೊಂದಿಗೆ ಒಡಂಬಡಿಕೆ (MoU) ಮಾಡಿಕೊಳ್ಳುವ ಬಗ್ಗೆ.** |
| **ಟಿಪ್ಪಣಿ** | ಸದರಿ ಸಂಸ್ಥೆಯ ಸಹಯೋಗದೊಂದಿಗೆ ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯವು ಭಾರತೀಯ ಜ್ಞಾನ ಪದ್ಧತಿಯ (IKS) ಕೋರ್ಸನ್ನು ಸಿದ್ಧಪಡಿಸಿದ್ದು, ಈ ಕೋರ್ಸನ್ನು ವಿಶ್ವವಿದ್ಯಾಲಯ ಮತ್ತು ಸಂಯೋಜಿತ ಕಾಲೇಜು, ಸಂಶೋಧನ ಕೇಂದ್ರಗಳಲ್ಲಿ, ಒಡಂಬಡಿಕೆ ಮಾಡಿಕೊಂಡ ವಿವಿಧ ಸಂಸ್ಥೆಗಳಲ್ಲಿ ನಡೆಸಬಹುದಾಗಿದೆ. ಈಗಾಗಲೇ ಒಡಂಬಡಿಕೆ ಮಾಡಿಕೊಂಡ ಕೆಲವು ಸಂಸ್ಥೆಗಳಿಗೆ ಈ ಕೋರ್ಸನ್ನು ನೋಡಲಾಗಿದೆ. ಆದ್ದರಿಂದ **Naxxatra Sciences, Banglore** ಈ ಸಂಸ್ಥೆಯೊಂದಿಗೆ ಒಡಂಬಡಿಕೆ (MoU) ಮಾಡಿಕೊಂಡಿದ್ದು ಸಭೆಯ ಅನುಮೋದನೆಗಾಗಿ ಮಂಡಿಸಿದೆ. |
| ನಿರ್ಣಯ | **Naxxatra Sciences, Banglore ಈ ಸಂಸ್ಥೆಯೊಂದಿಗೆ ಒಡಂಬಡಿಕೆ (MoU) ಮಾಡಿಕೊಳ್ಳಲು ಸಭೆಯು ಅನುಮೋದಿಸಿತು.** |
| **ವಿಷಯ 19** | The Austrian Academy of Sciences, Institute for the Cultural and intellectual History of Asia, Vienna, Astria **ಈ ಸಂಸ್ಥೆಯೊಂದಿಗೆ ಒಡಂಬಡಿಕೆ (MoU) ಮಾಡಿಕೊಳ್ಳುವ ಬಗ್ಗೆ.** |
| **ಟಿಪ್ಪಣಿ** | ವೇದಾಂತ ಮತ್ತು ನ್ಯಾಯ ದರ್ಶನಗಳ ಕುರಿತಾದ ಅಧ್ಯಯನ, ಇವುಗಳ ಭವ್ಯ ಪರಂಪರೆಯ ಅಧ್ಯಯನ, ಜಾಗತಿಕ ದಾರ್ಶನಿಕ ಪರಂಪರೆಯ ಮೇಲೆ ಇವುಗಳ ಪರಿಣಾಮದ ಕುರಿತಾಗಿ ಜಂಟಿ ಸಹಭಾಗಿತ್ವದಲ್ಲಿ ಕಾರ್ಯ ನಿರ್ವಹಿಸುವುದು ಈ ಒಡಂಬಡಿಕೆಯ ಮುಖ್ಯ ಉದ್ದೇಶವಾಗಿದೆ. ಬೋಧನೆ ಮತ್ತು ಸಂಶೋಧನೆಯ ಪರಿಣಾಮಕಾರಿತ್ವವನ್ನು ಹೆಚ್ಚಿಸುವಲ್ಲಿ ಎರಡು ಸಂಸ್ಥೆಗಳ ವಿದ್ಯಾರ್ಥಿಗಳು ಮತ್ತು ಸಂಶೋಧಕರಿಗೆ ಸಂಶೋಧನಾ ಅವಕಾಶವನ್ನು ಒದಗಿಸುವುದು ಈ ಸಹಯೋಗದ ಸಾಮಾನ್ಯ ಉದ್ದೇಶವಾಗಿದೆ; ಪರಸ್ಪರ ಆಸಕ್ತಿಗಳ ವಿಷಯಗಳ ಕುರಿತು ಸೆಮಿನಾರ್‌ಗಳು, ಸಮ್ಮೇಳನಗಳು ಮತ್ತು ಶೈಕ್ಷಣಿಕ ಕಾರ್ಯಾಗಾರಗಳನ್ನು ಜಂಟಿಯಾಗಿ ಆಯೋಜಿಸುವುದು; ಪುಸ್ತಕಗಳು, ಮೊನೊಗ್ರಾಫ್‌ಗಳು, ಸೆಮಿನಾರ್ ಮತ್ತು ಕಾರ್ಯಾಗಾರ ಸಂಪುಟಗಳು ಇತ್ಯಾದಿಗಳನ್ನು ಪ್ರಕಟಿಸುವುದು; ಸಾಮಾನ್ಯ ಜ್ಞಾನವನ್ನು ಪ್ರಸಾರ ಮಾಡುವುದು; ಸಾಮರ್ಥ್ಯ ನಿರ್ಮಾಣ ಕಾರ್ಯಕ್ರಮಗಳನ್ನು ಆಯೋಜಿಸುವುದು; ಅಧ್ಯಾಪಕರು / ಸಿಬ್ಬಂದಿ ಮತ್ತು ವಿದ್ಯಾರ್ಥಿಗಳ ವಿನಿಮಯ; ಜಂಟಿ ಸಂಶೋಧನೆ ಮತ್ತು ಪ್ರಕಟಣೆ ಚಟುವಟಿಕೆಗಳನ್ನು ನಡೆಸುವುದು; ಮತ್ತು ಶೈಕ್ಷಣಿಕ ಸಂಪನ್ಮೂಲ ಸಾಮಗ್ರಿಗಳ ವಿನಿಮಯ ಮತ್ತು ಪರಸ್ಪರ ಆಸಕ್ತಿಯ ಯಾವುದೇ ಇತರ ಯೋಜನೆಗಳು/ಚಟುವಟಿಕೆಗಳನ್ನು ನಡೆಸಲು The Austrian Academy of Sciences, Institute for the Cultural and intellectual History of Asia, Vienna, Astria ಈ ಸಂಸ್ಥೆಯೊಂದಿಗೆ ಒಡಂಬಡಿಕೆ (MoU) ಮಾಡಿಕೊಳ್ಳಲು ಸಭೆಯ ಅನುಮೋದನೆಗಾಗಿ ಮಂಡಿಸಿದೆ. |
| ನಿರ್ಣಯ | The Austrian Academy of Sciences, Institute for the Cultural and intellectual History of Asia, Vienna, Astria ಈ ಸಂಸ್ಥೆಯೊಂದಿಗೆ ಒಡಂಬಡಿಕೆ (MoU) ಮಾಡಿಕೊಳ್ಳಲು **ಸಭೆಯು ಅನುಮೋದಿಸಿತು. ಮುಂದುವರಿದು, ಒಡಂಬಡಿಕೆ (MoU) ಕೇವಲ ದಾಖಲೆಯಲ್ಲಿ ಮಾತ್ರವಲ್ಲ. ಅದರ ಉದ್ದೇಶವು ಅನುಷ್ಠಾನಗೊಳ್ಳಬೇಕು. ಆದ್ದರಿಂದ ವಿಶ್ವವಿದ್ಯಾಲಯದ ಎಲ್ಲಾ ಒಡಂಬಡಿಕೆ (MoU) ಗಳ ಅನುಷ್ಠಾನಕ್ಕಾಗಿ ಪ್ರೊ. ವೀರನಾರಾಯಣ ಪಾಂಡುರಂಗಿ, ವೇದಾಂತ ನಿಕಾಯಾಧ್ಯಕ್ಷರು, ಕ.ಸಂ.ವಿ. ಇವರನ್ನು ಮೇಲ್ವಿಚಾರಣೆಗೆ ನಿಯೋಜಿಸುವಂತೆ ಸಭೆಯು ತೀರ್ಮಾನಿಸಿತು.** |
| **ವಿಷಯ 20** | **ಉನ್ನತಿ ಹೀಲಿಂಗ್ ಫೌಂಡೇಶನ್ ಈ ಸಂಸ್ಥೆಯೊಂದಿಗೆ ಒಡಂಬಡಿಕೆ ಮಾಡಿಕೊಂಡು, ಮಾನಸಿಕ ಸ್ವಾಸ್ಥ್ಯ ಮತ್ತು ಯೋಗದ ಚಿಕಿತ್ಸೆ-ದೇಹ ಮತ್ತು ಮನಸ್ಸಿಗೆ ಪ್ರಥಮ ಚಿಕಿತ್ಸೆ ವಿಷಯದಲ್ಲಿ ಆರು ತಿಂಗಳ ಪ್ರಮಾಣಪತ್ರ ಕಾರ್ಯಕ್ರಮವನ್ನು ನಡೆಸುವ ಬಗ್ಗೆ.** |
| **ಟಿಪ್ಪಣಿ** | ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾನಿಲಯದಲ್ಲಿ ದೇಹ ಮತ್ತು ಮನಸ್ಸಿನ ತರಬೇತಿಗಾಗಿ ಮಾನಸಿಕ ಸ್ವಾಸ್ಥ್ಯ ಮತ್ತು ಯೋಗದ ಹೀಲಿಂಗ್ ಪ್ರಥಮ ಚಿಕಿತ್ಸೆಯಲ್ಲಿ ಪ್ರಮಾಣಪತ್ರ ಕಾರ್ಯಕ್ರಮದ ಅನುಷ್ಠಾನವನ್ನು ಮಾಡಬಹುದಾಗಿದೆ. ವಿದ್ಯಾರ್ಥಿಗಳ ಮಾನಸಿಕ ಆರೋಗ್ಯ ಮತ್ತು ಯೋಗಕ್ಷೇಮವನ್ನು ಪರಿಣಾಮಕಾರಿಯಾಗಿ ಬೆಂಬಲಿಸಲು ಅಗತ್ಯವಾದ |

| | |
|---|---|
| | ಜ್ಞಾನ, ಕೌಶಲ್ಯ ಮತ್ತು ಪ್ರಾಯೋಗಿಕ ಅನುಭವದೊಂದಿಗೆ ಭಾಗವಹಿಸುವವರನ್ನು ಸಜ್ಜುಗೊಳಿಸಲು ಪ್ರಮಾಣಪತ್ರ ಕಾರ್ಯಕ್ರಮವನ್ನು ವಿನ್ಯಾಸಗೊಳಿಸಲಾಗಿದೆ.<br>ಈ ಪ್ರಮಾಣಪತ್ರ ಕಾರ್ಯಕ್ರಮವು ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾನಿಲಯದ ಧ್ಯೇಯ ಮತ್ತು ಮೌಲ್ಯಗಳೊಂದಿಗೆ ಹೊಂದಿಕೆಯಾಗುತ್ತದೆ ಎಂದು ನಾವು ನಂಬುತ್ತೇವೆ. ವಿದ್ಯಾರ್ಥಿ ಮನೋವಿಜ್ಞಾನ ಮತ್ತು ಮಾನಸಿಕ ಆರೋಗ್ಯ ಬೆಂಬಲದಲ್ಲಿ ತರಬೇತಿ ಪಡೆದ ವೃತ್ತಿಪರರ ಹೆಚ್ಚುತ್ತಿರುವ ಅಗತ್ಯವನ್ನು ಪರಿಹರಿಸಲು ಅಮೂಲ್ಯವಾದ ಅವಕಾಶವನ್ನು ಒದಗಿಸುತ್ತದೆ. ಇದಲ್ಲದೆ, ಇದು ಶಿಕ್ಷಣದಲ್ಲಿ ಉತ್ಕೃಷ್ಟತೆಗೆ ನಮ್ಮ ಬದ್ಧತೆಯನ್ನು ಪ್ರತಿಬಿಂಬಿಸುತ್ತದೆ ಮತ್ತು ನಮ್ಮ ವಿದ್ಯಾರ್ಥಿಗಳು ಮತ್ತು ಒಟ್ಟಾರೆಯಾಗಿ ಸಮಾಜದ ವೈವಿಧ್ಯಮಯ ಅಗತ್ಯಗಳನ್ನು ಪೂರೈಸುವ ನಮ್ಮ ಸಮರ್ಪಣೆಯನ್ನು ಪ್ರತಿಬಿಂಬಿಸುತ್ತದೆ.<br>ಯೋಗಿಕ್ ಹೀಲಿಂಗ್ ಟ್ರೈನಿಂಗ್ ಸರ್ಟಿಫಿಕೇಟ್ ಕಾರ್ಯಕ್ರಮದ ಮೂಲಕ ವಿದ್ಯಾರ್ಥಿಗಳಿಗೆ ಸಮಗ್ರ ಸ್ವಾಸ್ಥ್ಯವು ನಮ್ಮ ಶೈಕ್ಷಣಿಕ ಕೊಡುಗೆಗಳನ್ನು ಉತ್ಕೃಷ್ಟಗೊಳಿಸುತ್ತದೆ ಮತ್ತು ಈ ನಿರ್ಣಾಯಕ ಪ್ರದೇಶದಲ್ಲಿ ಜ್ಞಾನದ ಪ್ರಗತಿಗೆ ಕೊಡುಗೆ ನೀಡುತ್ತದೆ. ಆದ್ದರಿಂದ ಉನ್ನತಿ ಹೀಲಿಂಗ್ ಫೌಂಡೇಶನ್ ಈ ಸಂಸ್ಥೆಯೊಂದಿಗೆ ಒಡಂಬಡಿಕೆ ಮಾಡಿಕೊಂಡು ಮಾನಸಿಕ ಸ್ವಾಸ್ಥ್ಯ ಮತ್ತು ಯೋಗದ ಚಿಕಿತ್ಸೆ-ದೇಹ ಮತ್ತು ಮನಸ್ಸಿಗೆ ಪ್ರಥಮ ಚಿಕಿತ್ಸೆ ವಿಷಯದಲ್ಲಿ ಆರು ತಿಂಗಳ ಪ್ರಮಾಣಪತ್ರ ಕಾರ್ಯಕ್ರಮವನ್ನು ನಡೆಸುವ ಬಗ್ಗೆ ಸಭೆಯ ಅನುಮೋದನೆಗಾಗಿ ಮಂಡಿಸಿದೆ. |
| ನಿರ್ಣಯ | ಉನ್ನತಿ ಹೀಲಿಂಗ್ ಫೌಂಡೇಶನ್ ಈ ಸಂಸ್ಥೆಯೊಂದಿಗೆ ಒಡಂಬಡಿಕೆ ಮಾಡಿಕೊಂಡು ಮಾನಸಿಕ ಸ್ವಾಸ್ಥ್ಯ ಮತ್ತು ಯೋಗದ ಚಿಕಿತ್ಸೆ-ದೇಹ ಮತ್ತು ಮನಸ್ಸಿಗೆ ಪ್ರಥಮ ಚಿಕಿತ್ಸೆ ವಿಷಯದಲ್ಲಿ ಆರು ತಿಂಗಳ ಪ್ರಮಾಣಪತ್ರ ಕಾರ್ಯಕ್ರಮವನ್ನು ನಡೆಸಲು **ಸಭೆಯು ಅನುಮೋದಿಸಿತು.** |
| ವಿಷಯ 21 | **ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯದ ಸ್ನಾತಕ-ಸ್ನಾತಕೋತ್ತರ ಹಾಗೂ ಇನ್ನಿತರ ಪರೀಕ್ಷೆಗಳಲ್ಲಿ ಉತ್ತೀರ್ಣರಾದ ವಿದ್ಯಾರ್ಥಿಗಳಿಗೆ ಅಂಕಪಟ್ಟಿಗಳನ್ನು ನೀಡುವ ಬಗೆಗೆ.** |
| **ಟಿಪ್ಪಣಿ** | ಉನ್ನತ ಶಿಕ್ಷಣ ಇಲಾಖೆಯ ಪ್ರಧಾನ ಕಾರ್ಯದರ್ಶಿಗಳು ಸಾರ್ವಜನಿಕ ವಿಶ್ವವಿದ್ಯಾಲಯಗಳ ಕುಲಸಚಿವರು ಮತ್ತು ಕುಲಪತಿಗಳೊಂದಿಗೆ ನಡೆಸಿದ ಹಲವಾರು ಸಭೆಗಳಲ್ಲಿ ಸ್ನಾತಕ ಮತ್ತು ಸ್ನಾತಕೋತ್ತರ ಪದವಿ ಪಡೆದ ವಿದ್ಯಾರ್ಥಿಗಳಿಗೆ ಅಂಕಪಟ್ಟಿಗಳ ಭೌತಿಕ ಪ್ರತಿ(Hard Copy)ಗಳನ್ನು ನೀಡದಂತೆ ಮೌಖಿಕವಾಗಿ ಸೂಚಿಸಿರುತ್ತಾರೆ. ಈ ಬಗ್ಗೆ ಕೆಲವು ವಿಶ್ವವಿದ್ಯಾಲಯಗಳು ರಾಜ್ಯಪಾಲರಿಗೆ ಪತ್ರ ಬರೆದು ಸ್ಪಷ್ಟನೆಯನ್ನು ಕೋರಿದ್ದು, ರಾಜ್ಯಪಾಲರು ಪತ್ರ ಸಂಖ್ಯೆ: ಜಿಎಸ್ 19 ಜಿಯುಎಂ 2022; ದಿನಾಂಕ: 27.12.2022ರಲ್ಲಿ, ವಿದ್ಯಾರ್ಥಿಗಳಿಗೆ ಭದ್ರತಾ ವೈಶಿಷ್ಟ್ಯಗಳನ್ನೊಳಗೊಂಡ ಅಂಕಪಟ್ಟಿಗಳು ಮತ್ತು ಪ್ರಮಾಣಪತ್ರಗಳ ಭೌತಿಕ ಪ್ರತಿಗಳನ್ನು ನೀಡುವಂತೆ ಹಾಗೂ Soft Copyಗಳನ್ನು NAD ಮೂಲಕ ಒದಗಿಸುವಂತೆ ಸೂಚಿಸಿರುತ್ತಾರೆ.<br>ಮುಂದುವರೆದು, ಸರ್ಕಾರದ ಆದೇಶ ಸಂಖ್ಯೆ: ಇಡಿ 29 EGOV 2023, ದಿನಾಂಕ: 16.10.2023ರಲ್ಲಿ 2023-24ನೇ ಶೈಕ್ಷಣಿಕ ಸಾಲಿನಿಂದ ಉನ್ನತ ಶಿಕ್ಷಣ ಇಲಾಖೆಯಡಿಯಲ್ಲಿನ ಅಧೀನ ಇಲಾಖೆಗಳು, ಸಾರ್ವಜನಿಕ ವಿಶ್ವವಿದ್ಯಾಲಯಗಳು ಹಾಗೂ ಎಲ್ಲಾ ಶೈಕ್ಷಣಿಕ ಸಂಸ್ಥೆಗಳು ಪದವಿ ಮತ್ತು ಸ್ನಾತಕೋತ್ತರ ಪದವಿ ಅಂಕಪಟ್ಟಿಗಳು, ಪ್ರಮಾಣಪತ್ರಗಳು ಮತ್ತು ಇತರ ಶೈಕ್ಷಣಿಕ ದಾಖಲೆಗಳನ್ನು NAD-Digilockerನಲ್ಲಿ ಡಿಜಿಟಲ್ ರೂಪದಲ್ಲಿ ಕಡ್ಡಾಯವಾಗಿ ಸಂಗ್ರಹಿಸಿಡಲು, ಉನ್ನತ ಶಿಕ್ಷಣದ ವಿದ್ಯಾರ್ಥಿಗಳು ಸದರಿ ಅಂಕಪಟ್ಟಿಗಳ Creditsಗಳನ್ನು ಅಕಾಡೆಮಿಕ್ ಬ್ಯಾಂಕ್ ಆಫ್ ಕ್ರೆಡಿಟ್ (ABC)ನಲ್ಲಿ ಕಡ್ಡಾಯವಾಗಿ ನೋಂದಾಯಿಸಿಕೊಳ್ಳಲು ಆದೇಶಿಸಿದೆ. ವಿವಿಧ ನೇಮಕಾತಿ |

| | |
|---|---|
| | ಪ್ರಾಧಿಕಾರಗಳು/ಸಂಸ್ಥೆಗಳು ನೇಮಕಾತಿ ಸಮಯದಲ್ಲಿ NAD-Digilockerನಲ್ಲಿನ ಅಂಕಪಟ್ಟಿ ಹಾಗೂ ಪ್ರಮಾಣಪತ್ರಗಳನ್ನು ದೃಢೀಕೃತವೆಂದು ಪರಿಗಣಿಸುವಂತೆ ಆದೇಶಿಸಿದೆ.' ಆದರೆ, ಅಂಕಪಟ್ಟಿಗಳ ಭೌತಿಕ ಪ್ರತಿಗಳನ್ನು ಮುದ್ರಿಸಿ ನೀಡುವ ಬಗೆಗೆ ಯಾವುದೇ ಪರಿಷ್ಕೃತ ಆದೇಶಗಳನ್ನು ಉನ್ನತ ಶಿಕ್ಷಣ ಇಲಾಖೆಯು ಹೊರಡಿಸಿರುವುದಿಲ್ಲ. ಅನಂತರವೂ ಉನ್ನತ ಶಿಕ್ಷಣ ಇಲಾಖೆಯ ಪ್ರಧಾನ ಕಾರ್ಯದರ್ಶಿಗಳು ನಡೆಸಿದ ಕುಲಸಚಿವರ ಸಭೆಗಳಲ್ಲಿ ಅಂಕಪಟ್ಟಿಗಳ ಭೌತಿಕ ಪ್ರತಿಗಳನ್ನು ನೀಡದಂತೆ ಮೌಖಿಕವಾಗಿ ತಿಳಿಸಿರುತ್ತಾರೆ.<br>ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯವು 2021-22ನೇ ಸಾಲಿನಿಂದ ಈವರೆಗೆ ಸ್ನಾತಕ-ಸ್ನಾತಕೋತ್ತರ ಹಾಗೂ ಇನ್ನಿತರ ಪರೀಕ್ಷೆಗಳನ್ನು ಬರೆದ ವಿದ್ಯಾರ್ಥಿಗಳಿಗೆ ಭೌತಿಕ ಅಂಕಪಟ್ಟಿಗಳನ್ನು ಮುದ್ರಿಸಿ ನೀಡಿರುವುದಿಲ್ಲ. ಅಂಕಪಟ್ಟಿಗಳು ಮತ್ತು ಪ್ರಮಾಣಪತ್ರಗಳ ದಾಖಲೆಗಳನ್ನು National Academic Depository (NAD)ನಲ್ಲಿ ಸಂಗ್ರಹಿಸಿಡಲಾಗುತ್ತಿದೆ. 2021-22ನೇ ಶೈಕ್ಷಣಿಕ ಸಾಲಿನಿಂದ ನಡೆದ ಸ್ನಾತಕ-ಸ್ನಾತಕೋತ್ತರ, ಸರ್ಟಿಫಿಕೇಟ್, ಡಿಪ್ಲೊಮಾ, ಪಿ.ಜಿ. ಡಿಪ್ಲೊಮಾ ಪರೀಕ್ಷೆಗಳನ್ನು ಬರೆದ ವಿದ್ಯಾರ್ಥಿಗಳಿಗೆ ನೀಡಲು ಅಂದಾಜು 10,000 ಅಂಕಪಟ್ಟಿಗಳು ಬೇಕಾಗಬಹುದಾಗಿದ್ದು, ಅಂಕಪಟ್ಟಿಗಳನ್ನು (Pre-printed Marks Card) ಮುದ್ರಿಸಲು ಅನುಮತಿಗಾಗಿ ಸಭೆಯಲ್ಲಿ ಮಂಡಿಸಿದೆ. |
| ನಿರ್ಣಯ | **2021-22ನೇ ಸಾಲಿನಿಂದ ನೀಡಬೇಕಾದ ಅಂಕಪತ್ರಗಳನ್ನು ಮುದ್ರಿಸಿ ವಿತರಿಸಲು ಸಭೆಯು ಅನುಮೋದಿಸಿತು. ಕರ್ನಾಟಕ ಸರ್ಕಾರದ KTPP ನಿಯಮಗಳನುಸಾರ ಕ್ರಮವಹಿಸಿ, ಭದ್ರತಾ ವೈಶಿಷ್ಟ್ಯಗಳನ್ನೊಳಗೊಂಡ ಪೂರ್ವಮುದ್ರಿತ ಅಂಕಪಟ್ಟಿಗಳನ್ನು ಮುದ್ರಿಸಲು ಹಾಗೂ ಫಲಿತಾಂಶದ ವಿವರಗಳನ್ನು ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯದ ಪರೀಕ್ಷಾಂಗದಿಂದಲೇ ಮುದ್ರಿಸಿ, ವಿದ್ಯಾರ್ಥಿಗಳಿಗೆ ನೀಡಲು ತೀರ್ಮಾನಿಸಲಾಯಿತು. ಅಂಕಪಟ್ಟಿಗಳ ಮುದ್ರಣಕ್ಕಾಗಿ ಪರೀಕ್ಷಾಂಗಕ್ಕೆ ಹೊಸದಾಗಿ ಉತ್ತಮ ಗುಣಮಟ್ಟದ ಪ್ರಿಂಟರ್‌ಅನ್ನು ನಿಯಮಾನುಸಾರ ಖರೀದಿಸಲು ಸಭೆಯು ಸೂಚಿಸಿತು.** |
| **ವಿಷಯ 22** | **ಅಂಕಪಟ್ಟಿಗಳು ಮತ್ತು ಪ್ರಮಾಣಪತ್ರಗಳ ಮಾದರಿಗಳನ್ನು ಪರಿಷ್ಕರಿಸುವ ಅಥವಾ ಯಥಾಸ್ಥಿತಿ ಮುಂದುವರೆಸುವ ಬಗೆಗೆ.** |
| **ಟಿಪ್ಪಣಿ** | ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯವು ನಡೆಸುತ್ತಿರುವ ವಿವಿಧ ಪರೀಕ್ಷೆಗಳಿಗೆ ಹಾಜರಾದ ವಿದ್ಯಾರ್ಥಿಗಳಿಗೆ ಅಂಕಪಟ್ಟಿಗಳು ಮತ್ತು ಪ್ರಮಾಣಪತ್ರಗಳನ್ನು ನೀಡುತ್ತಾ ಬಂದಿದೆ. ಪ್ರಸ್ತುತ ನೀಡುತ್ತಿರುವ ಅಂಕಪಟ್ಟಿ ಹಾಗೂ ಪ್ರಮಾಣಪತ್ರದ ಮಾದರಿಗಳನ್ನು ಸಮಿತಿಯು ಪರಾಮರ್ಶಿಸಿ, ಈಗಿರುವ ಮಾದರಿಗಳನ್ನು ಪರಿಷ್ಕರಿಸುವ ಅಥವಾ ಯಥಾಸ್ಥಿತಿಯನ್ನು ಮುಂದುವರೆಸುವ ಬಗ್ಗೆ ನಿರ್ಣಯಿಸುವುದಕ್ಕಾಗಿ ವಿಷಯವನ್ನು ಮಂಡಿಸಿದೆ. |
| ನಿರ್ಣಯ | **ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯದ ಅಂಕಪಟ್ಟಿಗಳು ಮತ್ತು ಪ್ರಮಾಣಪತ್ರಗಳ ಮಾದರಿಗಳನ್ನು ಪರಿಷ್ಕರಿಸಲು ಈ ಕೆಳಗಿನಂತೆ ಸಮಿತಿಯನ್ನು ರಚಿಸಲಾಯಿತು.<br>1. ಪ್ರೊ. ವೀರನಾರಾಯಣ ಪಾಂಡುರಂಗಿ, ಡೀನ್, ವೇದಾಂತ ನಿಕಾಯ – ಅಧ್ಯಕ್ಷರು<br>2. ಡಾ. ಶರಚ್ಚಂದ್ರ ಸ್ವಾಮಿ, ಉಪನಿರ್ದೇಶಕರು, ಅಧ್ಯಯನಾಂಗ – ಸದಸ್ಯರು<br>3. ಡಾ. ಶ್ರೀಕಾಂತ ಪುರೋಹಿತ, ಪ್ರಶಿಕ್ಷಣ ಪರಿಷತ್ತಿನ ಸದಸ್ಯರು – ಸದಸ್ಯರು<br>4. ಡಾ. ನಾಗಪತಿ ಕೇ. ಭಟ್, ಪ್ರಶಿಕ್ಷಣ ಪರಿಷತ್ತಿನ ಸದಸ್ಯರು – ಸದಸ್ಯರು<br>5. ಡಾ. ರಾಮಕೃಷ್ಣ ಭಟ್, ಕುಲಸಚಿವರು (ಮೌಲ್ಯಮಾಪನ)(ಪ್ರ) – ಸದಸ್ಯ ಕಾರ್ಯದರ್ಶಿ<br>ಈ ಸಮಿತಿಯು ದಿ: 31.08.2024ರೊಳಗೆ ವರದಿ ನೀಡುವಂತೆ ಸೂಚಿಸಲು ತೀರ್ಮಾನಿಸಲಾಯಿತು.** |

| | |
|---|---|
| ವಿಷಯ 23 | **ಟ್ರಾನ್ಸ್‌ಸ್ಕ್ರಿಪ್ಟ್ ಪ್ರಮಾಣಪತ್ರವನ್ನು ಸಂಸ್ಕೃತ ಅಥವಾ ಇಂಗ್ಲಿಷ್ ಭಾಷೆಯಲ್ಲಿ ನೀಡುವ ಬಗೆಗೆ.** |
| ಟಿಪ್ಪಣಿ | ರಾಜ್ಯದ ಹಾಗೂ ರಾಷ್ಟ್ರ/ಅಂತಾರಾಷ್ಟ್ರೀಯ ಮಟ್ಟದ ಕೆಲವು ಶಿಕ್ಷಣ ಸಂಸ್ಥೆಗಳು ಮತ್ತು ನೇಮಕಾತಿ ಪ್ರಾಧಿಕಾರಗಳು ಉನ್ನತ ಶಿಕ್ಷಣ ಬಯಸುವ/ಉದ್ಯೋಗ ಬಯಸುವ ವಿದ್ಯಾರ್ಥಿಗಳಿಂದ ಅಂಕಪಟ್ಟಿಗಳು, ಪದವಿ ಪ್ರಮಾಣಪತ್ರಗಳ ಜೊತೆಗೆ ಪದವಿಯ (ಎಲ್ಲಾ ವಾರ್ಷಿಕ/ಸೆಮಿಸ್ಟರ್ ಪರೀಕ್ಷೆಗಳ) ಏಕೀಕೃತ ಅಂಕಪಟ್ಟಿ (Transcript/ Consolidated Statement of Marks) ಯನ್ನು ಸಲ್ಲಿಸುವಂತೆ ವಿದ್ಯಾರ್ಥಿಗಳಿಗೆ ಸೂಚಿಸುತ್ತಿವೆ. ಅದರಂತೆ, ವಿಶ್ವವಿದ್ಯಾಲಯವು ಏಕೀಕೃತ ಅಂಕಪಟ್ಟಿಯನ್ನು ನೀಡುತ್ತಾ ಬಂದಿದೆ. ಆದರೆ, ಇತರೆ ರಾಜ್ಯಗಳ ಅಥವಾ ಅಂತಾರಾಷ್ಟ್ರೀಯ ಸಂಸ್ಕೃತೇತರ ಶಿಕ್ಷಣ ಸಂಸ್ಥೆಗಳು ಮತ್ತು ನೇಮಕಾತಿ ಪ್ರಾಧಿಕಾರಗಳು ನಿರ್ದಿಷ್ಟ ಭಾಷೆಯಲ್ಲಿ ಏಕೀಕೃತ ಅಂಕಪಟ್ಟಿಗಳನ್ನು ಸಲ್ಲಿಸುವಂತೆ ತಿಳಿಸುತ್ತಿವೆ. ಅದರಂತೆ, ವಿದ್ಯಾರ್ಥಿಯು ಅಪೇಕ್ಷಿಸುವ ಸಂಸ್ಕೃತ ಅಥವಾ ಇಂಗ್ಲಿಷ್ ಭಾಷೆಯಲ್ಲಿ ಏಕೀಕೃತ ಅಂಕಪಟ್ಟಿಗಳನ್ನು ನೀಡಬಹುದಾಗಿದ್ದು, ಸಭೆಯ ಅನುಮೋದನೆಗಾಗಿ ವಿಷಯವನ್ನು ಮಂಡಿಸಿದೆ. |
| ನಿರ್ಣಯ | **ವಿದ್ಯಾರ್ಥಿಗಳಿಗೆ ಅಗತ್ಯವಿರುವಂತೆ ಸಂಸ್ಕೃತ ಅಥವಾ ಆಂಗ್ಲಭಾಷೆಯಲ್ಲಿ ಏಕೀಕೃತ ಅಂಕಪಟ್ಟಿಗಳನ್ನು ಮುದ್ರಿಸಿ ನೀಡಲು ಸಭೆಯು ತೀರ್ಮಾನಿಸಿತು.** |
| ವಿಷಯ 24 | **ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯವು ಹೊಸದಾಗಿ ನಡೆಸುತ್ತಿರುವ ಸರ್ಟಿಫಿಕೇಟ್ ಕೋರ್ಸ್‌ಗಳ ಪರೀಕ್ಷೆಗಳನ್ನು ನಡೆಸಲು ತಾತ್ಕಾಲಿಕ ಪರೀಕ್ಷಾ ಕೇಂದ್ರಗಳಿಗೆ ಅನುಮತಿ ನೀಡುವ ಬಗೆಗೆ.** |
| ಟಿಪ್ಪಣಿ | ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯವು 2023–24ನೇ ಸಾಲಿನಿಂದ ಕೆಳಕಂಡ ವಿಷಯಗಳಲ್ಲಿ ಹೊಸದಾಗಿ ಸರ್ಟಿಫಿಕೇಟ್ ಕೋರ್ಸ್‌ಗಳನ್ನು ಪ್ರಾರಂಭಿಸಿದೆ. ವಿಶ್ವವಿದ್ಯಾಲಯ ಹಾಗೂ ವಿಶ್ವವಿದ್ಯಾಲಯದ ಮಾನ್ಯತೆ ಹೊಂದಿದ ಸಂಶೋಧನ ಕೇಂದ್ರಗಳಲ್ಲಿ ಈ ಸರ್ಟಿಫಿಕೇಟ್ ಕೋರ್ಸ್‌ಗಳು ನಡೆಯುತ್ತಿದ್ದು, ಅಂದಾಜು 4,000ಕ್ಕೂ ಹೆಚ್ಚು ವಿದ್ಯಾರ್ಥಿಗಳು ಈ ಕೋರ್ಸ್‌ಗಳ ಅಧ್ಯಯನ ಮಾಡುತ್ತಿದ್ದಾರೆ. ಪ್ರಸ್ತುತ ಈ ಕೋರ್ಸ್‌ಗಳ ಪರೀಕ್ಷೆಗಳನ್ನು ನಡೆಸಬೇಕಾಗಿರುತ್ತದೆ. ವಿದ್ಯಾರ್ಥಿಗಳ ಸಂಖ್ಯೆ ಹೆಚ್ಚಾಗಿರುವ ಹಿನ್ನೆಲೆಯಲ್ಲಿ, ವಿಶ್ವವಿದ್ಯಾಲಯದ ಆವರಣದಲ್ಲಿ ಈ ಎಲ್ಲಾ ವಿದ್ಯಾರ್ಥಿಗಳು ಪರೀಕ್ಷೆಯನ್ನು ಬರೆಯಲು ಅಗತ್ಯ ಮೂಲಭೂತ ಸೌಲಭ್ಯಗಳಿರುವುದಿಲ್ಲ. ಈ ಹಿನ್ನೆಲೆಯಲ್ಲಿ, ಅಗತ್ಯ ಮೂಲಭೂತ ಸೌಲಭ್ಯಗಳನ್ನು ಹೊಂದಿರುವ ಸಂಶೋಧನ ಕೇಂದ್ರಗಳಿಗೆ ಅಥವಾ ಖಾಸಗಿ ಶಿಕ್ಷಣ ಸಂಸ್ಥೆಗಳಲ್ಲಿ ಪರೀಕ್ಷೆಗಳನ್ನು ನಡೆಸಲು 'ತಾತ್ಕಾಲಿಕ ಪರೀಕ್ಷಾ ಕೇಂದ್ರ'ಕ್ಕೆ ಅನುಮತಿಯನ್ನು ನೀಡಬಹುದಾಗಿರುತ್ತದೆ. ಈ ಪರೀಕ್ಷಾ ಕೇಂದ್ರಗಳಿಗೆ ವಿಶ್ವವಿದ್ಯಾಲಯದ ಬೋಧಕ ಸಿಬ್ಬಂದಿಗಳು, ಸಂಶೋಧನ ಕೇಂದ್ರದ ನಿರ್ದೇಶಕರು/ಉಪ ನಿರ್ದೇಶಕರು ಹಾಗೂ ಸಂಯೋಜಿತ ಕಾಲೇಜುಗಳ ಅಧ್ಯಾಪಕರನ್ನು ಮುಖ್ಯ ಅಧೀಕ್ಷಕರು/ಪರಿವೀಕ್ಷಕರನ್ನಾಗಿ ನಿಯೋಜಿಸಬಹುದಾಗಿರುತ್ತದೆ. ಈ ತಾತ್ಕಾಲಿಕ ಪರೀಕ್ಷಾ ಕೇಂದ್ರಗಳಿಗೆ ಪಾವತಿಸಬೇಕಾದ ನಿರ್ವಹಣಾ ವೆಚ್ಚ, ಪರೀಕ್ಷಾ ಸಾದಿಲ್ವಾರು ವೆಚ್ಚ, ಪರೀಕ್ಷಾ ಮುಖ್ಯಾಧೀಕ್ಷಕರು, ಪರಿವೀಕ್ಷಕರು ಹಾಗೂ ಇನ್ನಿತರ ವೆಚ್ಚಗಳನ್ನು ಪಾವತಿಸಲು ಸಭೆಯ ನಿರ್ಣಯಕ್ಕಾಗಿ ವಿಷಯವನ್ನು ಮಂಡಿಸಿದೆ. |
| ನಿರ್ಣಯ | **ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯವು ಹೊಸದಾಗಿ ನಡೆಸುತ್ತಿರುವ ಸರ್ಟಿಫಿಕೇಟ್ ಕೋರ್ಸ್‌ಗಳ ಪರೀಕ್ಷೆಗಳನ್ನು ನಡೆಸಲು ಅಗತ್ಯತೆಗನುಸಾರವಾಗಿ ತಾತ್ಕಾಲಿಕ ಪರೀಕ್ಷಾ ಕೇಂದ್ರಗಳಿಗೆ ಅನುಮತಿಯನ್ನು ನೀಡಲು ಸಭೆಯು ಒಪ್ಪಿಗೆ ಸೂಚಿಸಿತು.** |
| ವಿಷಯ 25 | **ಡಾ. ವಿನಯ್ ಪಿ., ಸಹಾಯಕ ಪ್ರಾಧ್ಯಾಪಕರು, ವೇದಾಂತ ವಿಭಾಗ ಇವರನ್ನು ಫ್ಯಾಕಲ್ಟಿ ಆಫ್ ವೇದಿಕ್ ಸ್ಟಡೀಸ್ ನಿಕಾಯದ ಡೀನ್ ರಾಗಿ ನೇಮಿಸುವ ಬಗ್ಗೆ.** |
| ಟಿಪ್ಪಣಿ | ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯ ಅಧಿನಿಯಮ – 2009ರ ಉಪಬಂಧ 49ರಲ್ಲಿ ವಿಶ್ವವಿದ್ಯಾಲಯದ ವಿವಿಧ |

| | |
|---|---|
| | ಅಧ್ಯಯನ ನಿಕಾಯಗಳನ್ನು ಹೇಳಿದ್ದು, ಅದರಲ್ಲಿ ಫ್ಯಾಕಲ್ಟಿ ಆಫ್ ವೇದಿಕ್ ಸ್ಟಡೀಸ್ ನಿಕಾಯವೂ ಇದೆ. ಸಂಸ್ಕೃತದ ಸಮಗ್ರ ಅಭಿವೃದ್ಧಿಯ ದೃಷ್ಟಿಯಿಂದ ಈ ನಿಕಾಯವೂ ಸಹ ಅತ್ಯಂತ ಅವಶ್ಯಕವಾಗಿದೆ. ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯ ಅಧಿನಿಯಮ – 2009ರ ಉಪಬಂದ 14(1) ಮತ್ತು(2) ರಲ್ಲಿ ಕುಲಪತಿಗಳು ಪ್ರಾಧ್ಯಾಪಕರನ್ನು ನಿಕಾಯಾಧ್ಯಕ್ಷರನ್ನಾಗಿ ನೇಮಿಸಬಹುದು, ಒಂದು ವೇಳೆ ಪ್ರಾಧ್ಯಾಪಕರು ಲಭ್ಯವಿಲ್ಲದಿದ್ದಲ್ಲಿ ಕುಲಪತಿಗಳು ಡೀನ್ ರ ಅಧಿಕಾರವನ್ನು ಚಲಾಯಿಸಬಹುದು ಎಂದು ತಿಳಿಸಲಾಗಿದೆ. ಆದ್ದರಿಂದ ನಿಕಾಯದ ಬೆಳವಣಿಗೆಯ ದೃಷ್ಟಿಯಿಂದ ಡಾ. ವಿನಯ್ ಪಿ., ಸಹಾಯಕ ಪ್ರಾಧ್ಯಾಪಕರು, ವೇದಾಂತ ವಿಭಾಗ ಇವರನ್ನು ಫ್ಯಾಕಲ್ಟಿ ಆಫ್ ವೇದಿಕ್ ಸ್ಟಡೀಸ್ ನಿಕಾಯದ ಡೀನ್ ರಾಗಿ ನೇಮಿಸುವ ಬಗ್ಗೆ ಸಭೆಯ ಅನುಮೋದನೆಗೆ ಮಂಡಿಸಿದೆ. |
| ನಿರ್ಣಯ | **ಡಾ. ವಿನಯ್ ಪಿ., ಸಹಾಯಕ ಪ್ರಾಧ್ಯಾಪಕರು, ವೇದಾಂತ ವಿಭಾಗ ಇವರನ್ನು ಫ್ಯಾಕಲ್ಟಿ ಆಫ್ ವೇದಿಕ್ ಸ್ಟಡೀಸ್ ನಿಕಾಯದ ಪ್ರಭಾರಿ ಡೀನ್ ರಾಗಿ ನೇಮಿಸಲು ಸಭೆಯು ಅನುಮೋದಿಸಿತು. ಹಾಗೂ ಈ ನಿಕಾಯದಡಿಯ ಜ್ಯೋತಿಷ್ಯ, ವೇದ ಮೊದಲಾದ ವಿಭಾಗಗಳಡಿಯ ಡಿಪ್ಲೊಮಾ, ವಿದ್ಯಾವಾರಿಧಿ ಮೊದಲಾದ ಕೋರ್ಸಗಳನ್ನು ನಡೆಸಲು ಇದು ಅತ್ಯಗತ್ಯ ಎಂದು ಸಭೆಯು ಅಭಿಪ್ರಾಯಿಸಿತು.** |
| **ವಿಷಯ 26** | **2024–25ನೇ ಶೈಕ್ಷಣಿಕ ವೇಳಾಪಟ್ಟಿಯನ್ನು ಅಳವಡಿಸಿಕೊಂಡಿರುವ ಬಗ್ಗೆ.** |
| ಟಿಪ್ಪಣಿ | ಸರ್ಕಾರದ ಆದೇಶ ಸಂಖ್ಯೆ: ಇಡಿ 201 ಯುಎನ್‌ಇ 2023; ದಿನಾಂಕ: 11.06.2024ರಲ್ಲಿ 2024–25ನೇ ಸಾಲಿನ ಸ್ನಾತಕ ಮತ್ತು ಸ್ನಾತಕೋತ್ತರ ಪದವಿಯ ಶೈಕ್ಷಣಿಕ ವೇಳಾಪಟ್ಟಿಯನ್ನು ಉನ್ನತ ಶಿಕ್ಷಣ ಇಲಾಖೆಯ ಅಡಿಯ ಎಲ್ಲಾ ವಿಶ್ವವಿದ್ಯಾಲಯಗಳು ಕಡ್ಡಾಯವಾಗಿ ಅನುಷ್ಠಾನಗೊಳಿಸುವಂತೆ ಸೂಚಿಸಲಾಗಿದೆ. ಅದರಂತೆ, ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯದ ವಾರ್ಷಿಕ ವೇಳಾಪಟ್ಟಿಯನ್ನು ಸಾಂದರ್ಭಿಕ ಬದಲಾವಣೆಗಳೊಂದಿಗೆ ಸಿದ್ಧಪಡಿಸಿ, ಪ್ರಶಿಕ್ಷಣ ಪರಿಷತ್ತಿನ ಅನುಮೋದನೆಗಾಗಿ ಮಂಡಿಸಿದೆ. |
| ನಿರ್ಣಯ | **2024–25ನೇ ಶೈಕ್ಷಣಿಕ ವೇಳಾಪಟ್ಟಿಯನ್ನು ಸಭೆಯು ಅನುಮೋದಿಸಿತು.** |
| **ವಿಷಯ 27** | **ವ್ಯಾಖ್ಯಾನ ಮಾಲೆ ಕಾರ್ಯಕ್ರಮವನ್ನು ಆಯೋಜಿಸುವ ಬಗ್ಗೆ.** |
| ಟಿಪ್ಪಣಿ | ಸಂಸ್ಕೃತ ಹಾಗೂ ದರ್ಶನ ಶಾಸ್ತ್ರಗಳ ಪ್ರಚಾರ ಮತ್ತು ಪ್ರಸಾರದ ದೃಷ್ಟಿಯಿಂದ ವಿವಿಧ ದರ್ಶನ ವಿಷಯಗಳ ಕುರಿತು ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯದಿಂದ ವ್ಯಾಖ್ಯಾನ ಮಾಲೆ ಕಾರ್ಯಕ್ರಮವನ್ನು ಈ ಕೆಳಕಂಡಂತೆ ಆಯೋಜಿಸಲು ಉದ್ದೇಶಿಸಲಾಗಿದೆ. ವೇದಾಂತದ ನಾಲ್ಕು ಶಾಖೆಗಳಲ್ಲಿ ವಿಶಿಷ್ಟ ವಿದ್ವಾಂಸರಿಂದ ಪ್ರವಚವ/ಉಪನ್ಯಾಸವನ್ನು ನಡೆಸಲು ಈ ಕೆಳಕಂಡಂತೆ ಸಂಯೋಜಕರನ್ನು ನೇಮಿಸಲಾಗಿದೆ:<br>ದ್ವೈತವೇದಾಂತ – ಡಾ. ವಿನಯ್ ಪಿ., ಸಹಾಯಕ ಪ್ರಾಧ್ಯಾಪಕರು, ಕ.ಸಂ.ವಿ.<br>ಅದ್ವೈತವೇದಾಂತ – ಡಾ. ರಾಮಕೃಷ್ಣ ಭಟ್ ಕೆ., ಸಹಾಯಕ ಪ್ರಾಧ್ಯಾಪಕರು, ಕ.ಸಂ.ವಿ.<br>ಶಕ್ತಿವಿಶಿಷ್ಟಾದ್ವೈತವೇದಾಂತ – ಡಾ. ಶರತ್‌ಚಂದ್ರಸ್ವಾಮಿ, ಸಹಾಯಕ ಪ್ರಾಧ್ಯಾಪಕರು, ಕ.ಸಂ.ವಿ.<br>ವಿಶಿಷ್ಟಾದ್ವೈತವೇದಾಂತ – ಭಗವದ್ ರಾಮಾನುಜ ರಾಷ್ಟ್ರೀಯ ಸಂಶೋಧನ ಸಂಸ್ಥೆ, ಮೇಲುಕೋಟೆ<br>ಒಂದು ಉಪನ್ಯಾಸ ಕಾರ್ಯಕ್ರಮಕ್ಕೆ ತಲಾ ರೂ. 2000/– ವೆಚ್ಚವನ್ನು ಅಂದಾಜಿಸಲಾಗಿದ್ದು, ವಿಶಿಷ್ಟಾದ್ವೈತವೇದಾಂತ ಉಪನ್ಯಾಸ ಮಾಲಿಕೆ ಕಾರ್ಯಕ್ರಮದ ವೆಚ್ಚವನ್ನು ಸದರಿ ಸಂಸ್ಥೆಯವರೇ ಭರಿಸಲಿದ್ದಾರೆ.<br>ಈ ವ್ಯಾಖ್ಯಾನ ಮಾಲೆ ಆಯೋಜನೆಗೆ ಸಭೆಯ ಅನುಮೋದನೆಗಾಗಿ ಮಂಡಿಸಿದೆ. |
| ನಿರ್ಣಯ | **ವ್ಯಾಖ್ಯಾನ ಮಾಲೆ ಕಾರ್ಯಕ್ರಮವನ್ನು ಆಯೋಜಿಸಲು ಸಭೆಯು ಅನುಮೋದಿಸಿತು.** |
| **ವಿಷಯ 29** | **ವಿಶ್ವವಿದ್ಯಾಲಯದ ಸಂಯೋಜಿತ ಕಾಲೇಜುಗಳ ಪಠ್ಯಕ್ರಮವನ್ನು ಸಿದ್ಧಪಡಿಸುವ ಮತ್ತು ಅವಶ್ಯವಿರುವ ಪಠ್ಯಪುಸ್ತಕಗಳನ್ನು ಮುದ್ರಿಸುವ ಕುರಿತು.** |

| | |
|---|---|
| ಟಿಪ್ಪಣಿ | ಕರ್ನಾಟಕ ಸರ್ಕಾರವು ಪ್ರಸ್ತುತ ಸಾಲಿನಿಂದ ರಾಜ್ಯ ಶಿಕ್ಷಣ ನೀತಿಯನ್ನು ಅನುಷ್ಠಾನಗೊಳಿಸಲು ಆದೇಶಿಸಿದೆ. ಅದರಂತೆ ಸಂಯೋಜಿತ ಕಾಲೇಜಿನ ವಿವಿಧ ಶಾಸ್ತ್ರಗಳಲ್ಲಿ ಬಿ.ಎ. ಮತ್ತು ಎಂ.ಎ. ಕೋರ್ಸ್ ಗಳ ಸ್ವರೂಪಕ್ಕನುಗುಣವಾಗಿ ಪಠ್ಯಕ್ರಮವನ್ನು ಸಿದ್ಧಪಡಿಸಿ ಜಾರಿಗೊಳಿಸಬೇಕು. ಆದ್ದರಿಂದ ವಿಶ್ವವಿದ್ಯಾಲಯದ ಸಂಯೋಜಿತ ಕಾಲೇಜುಗಳಿಗೆ ಬಿ.ಎ/ಎಂಎ ತರಗತಿಗಳಿಗೆ ಪಠ್ಯಕ್ರಮವನ್ನು ಸಿದ್ಧಪಡಿಸುವ ಪ್ರಶಿಕ್ಷಣ ಪರಿಷತ್ತಿನ ಅನುಮತಿಗಾಗಿ ಮಂಡಿಸಿದೆ.<br>ವಿಶ್ವವಿದ್ಯಾಲಯದ ಸಂಯೋಜಿತ ಕಾಲೇಜುಗಳಲ್ಲಿ ವಿವಿಧ ಶಾಸ್ತ್ರಗಳಲ್ಲಿ ಬಿ.ಎ. ಮತ್ತು ಎಂ.ಎ. ಕೋರ್ಸ್ ಗಳು ನಡೆಯುತ್ತಿವೆ. ಸರ್ಕಾರದ ಶಿಕ್ಷಣ ನೀತಿ, ಆದೇಶಗಳಿಗನುಸಾರವಾಗಿ ವಿಶ್ವವಿದ್ಯಾಲಯದಿಂದ ಸಿದ್ಧಪಡಿಸಿದ ಪಾಠ್ಯಕ್ರಮವನ್ನು ಅನುಷ್ಠಾನಗೊಳಿಸಲಾಗುತ್ತದೆ. ಆದರೆ ಇವುಗಳಲ್ಲಿ ಅನೇಕ ಪುಸ್ತಕಗಳು ಮುದ್ರಣವು ಲಭ್ಯವಿರುವುದಿಲ್ಲ. ಆದ್ದರಿಂದ ವಿದ್ಯಾರ್ಥಿಗಳ ಹಿತದೃಷ್ಟಿಯಿಂದ ಈ ಕೋರ್ಸಗಳಿಗೆ ಅವಶ್ಯವಿರುವ ಪಠ್ಯಪುಸ್ತಕಗಳನ್ನು ಪ್ರಸಾರಾಂಗದಿಂದ ವಿಶ್ವವಿದ್ಯಾಲಯದ ಮುದ್ರಿಸಲು ಪ್ರಶಿಕ್ಷಣ ಪರಿಷತ್ತಿನ ಅನುಮತಿಗಾಗಿ ಮಂಡಿಸಿದೆ. |
| ನಿರ್ಣಯ | ವಿಶ್ವವಿದ್ಯಾಲಯದ ಸಿಡಿಸಿ ಮತ್ತು ಅಧ್ಯಯನ ಮಂಡಳಿಗಳು ಜೊತೆಗೂಡಿ ದಿ: 30.08.2024ರೊಳಗೆ ಪಾಠ್ಯಕ್ರಮವನ್ನು ಸಿದ್ಧಪಡಿಸಿ, ಅಗತ್ಯವಾದ ಪುಸ್ತಕಗಳ ಯಾದಿಯನ್ನು ನೀಡಬೇಕು. ಅದರ ಆಧಾರದಲ್ಲಿ ಉತ್ತಮ ವ್ಯಾಖ್ಯಾನವಿರುವ ಅಗತ್ಯವಾದ ಪುಸ್ತಕಗಳನ್ನು ಸುಂದರ ಲಿಪಿಯಲ್ಲಿ ಪ್ರಸಾರಾಂಗದಿಂದ ಮುದ್ರಿಸಿ ಸಂಯೋಜಿತ ಕಾಳೇಜುಗಳಿಗೆ ವಿತರಿಸಲು ಮತ್ತು ಇ-ಪುಸ್ತಕವನ್ನು ವಿಶ್ವವಿದ್ಯಾಲಯದ ಜಾಲತಾಣದಲ್ಲಿ ಪ್ರಕಟಿಸಲು ತೀರ್ಮಾನಿಸಲಾಯಿತು. |
| **ವಿಷಯ 30** | **ವಿದ್ವತ್ ಸಂದರ್ಶನ ಕಾರ್ಯಕ್ರಮವನ್ನು ಆಯೋಜಿಸುವ ಕುರಿತು.** |
| ಟಿಪ್ಪಣಿ | ಕರ್ನಾಟಕದಲ್ಲಿ ಹಲವು ವಿದ್ವಾಂಸರು ಇಂದಿಗೂ ಸಂಸ್ಕೃತ ಕ್ಷೇತ್ರವನ್ನು ಶ್ರೀಮಂತಗೊಳಿಸುತ್ತಿದ್ದಾರೆ. ಹಲವರು ಎಲೆ ಮರೆಯ ಕಾಯಿಯಂತೆ ಸುರಸರ್ಸ್ವತಿಗೆ ತಮ್ಮ ಸೇವೆ ಸಲ್ಲಿಸುತ್ತಿದ್ದಾರೆ. ಅಂತಹ ವಿದ್ವಾಂಸರ ಅನುಭವವು ಮುಂದಿನ ಪೀಳಿಗೆಗೆ ಮಾರ್ಗದರ್ಶಕವಾಗಬಲ್ಲದು. ಅವರ ಅತ್ಯಮೂಲ್ಯ ಜ್ಞಾನ ಸಂಪತ್ತನ್ನು ಉಳಿಸಿ ಬೆಳೆಸಬೇಕು. ಆದ್ದರಿಂದ ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯದಿಂದ 60 ಜನ ವಿದ್ವಾಂಸರ ಸಂದರ್ಶನವನ್ನು ನಡೆಸುವ "**ವಿದ್ವತ್ ಸಂದರ್ಶನ**" ಕಾರ್ಯಕ್ರಮವನ್ನು ಆಯೋಜಿಸಲು ಪ್ರಶಿಕ್ಷಣ ಪರಿಷತ್ತಿನ ಅನುಮತಿಗಾಗಿ ಮಂಡಿಸಿದೆ. |
| ನಿರ್ಣಯ | **ಮಾನ್ಯ ಸದಸ್ಯರು ಹಲವು ವಿದ್ವಾಂಸರ ಹೆಸರನ್ನು ಸೂಚಿಸಿದರು. ಅವರನ್ನು ಹಾಗೂ ಈ** 60 ಜನ ವಿದ್ವಾಂಸ ಸಂದರ್ಶನವನ್ನು ನಡೆಸುವ "**ವಿದ್ವತ್ ಸಂದರ್ಶನ**" ಕಾರ್ಯಕ್ರಮವನ್ನು ಆಯೋಜಿಸಲು **ಸಭೆಯು ಅನುಮೋದಿಸಿತು.** |
| **ವಿಷಯ 31** | **ಪ್ರಕಟಣೆಗೆ ಬಾಕಿ ಇರುವ ಪುಸ್ತಕಗಳನ್ನು ಮುದ್ರಿಸುವ ಕುರಿತು.** |
| ಟಿಪ್ಪಣಿ | ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯದಿಂದ ಪ್ರಕಟಿಸಲು ಯೋಗ್ಯವಾದ ಸಂಸ್ಕೃತ ಮತ್ತು ಸಂಸ್ಕೃತ ಕ್ಷೇತ್ರಕ್ಕೆ ಸಂಬಂಧಿಸಿದ ಈ ಕೆಳಗಿನ ಪುಸ್ತಕಗಳು ಕಾರಣಾಂತರದಿಂದ ಮುದ್ರಣವಾಗಿಲ್ಲ.<br>1 ಪ್ರೊ.ಎಂ.ಕೆ.ಶ್ರೀಧರ್ ಮತ್ತು ಡಾ.ಗಾಯತ್ರೀ ಅವರ 'ಸವಿಜ್ಞಾನಂ ತಂತ್ರಜ್ಞಾನಂ'<br>2 ಡಾ.ಸುಬ್ರಾಯ ಈಶ್ವರ ಹೆಗಡೆ ಅವರ "ಭಾರತೀಯ ಋಷಿಮುನಿಗಳು ಮತ್ತು ನದಿಗಳು"<br>3 ಡಾ.ಗಾಯತ್ರೀ ಅವರ "ಭರತ ವರ್ಷೇ ಗಣಿತ ವೈಭವಂ"<br>ಈ ಪುಸ್ತಕಗಳನ್ನು ಪ್ರಕಟಿಸಲು ಪ್ರಶಿಕ್ಷಣ ಪರಿಷತ್ತಿನ ಅನುಮತಿಗಾಗಿ ಮಂಡಿಸಿದೆ. |
| ನಿರ್ಣಯ | ಈ ಮೂರು ಪುಸ್ತಕಗಳ ಜೊತೆಗೆ Lord Narasimha ಮತ್ತು Science and Technologi in Ancient India ಸೇರಿ ಒಟ್ಟೂ 05 ಪುಸ್ತಕಗಳನ್ನು ಪ್ರಸಾರಾಂಗದಿಂದ ಮುದ್ರಿಸಲು ಹಾಗೂ ಈ 60:40 ಅನುಪಾತದಲ್ಲಿ ವಿತರಿಸಲು **ಸಭೆಯು ಅನುಮೋದಿಸಿತು. ಜೊತೆಗೆ ಪುಸ್ತಕ ಮಾರಾಟಕ್ಕಾಗಿ ವಿಶ್ವವಿದ್ಯಾಲಯದ ಜಾಳತಾಣ, Amazon ಜಾಲತಾಣವನ್ನು ಬಳಸಲು ತೀರ್ಮಾನಿಸಲಾಯಿತು. ಅಲ್ಲದೇ ಈ ಹಿಂದೆ ಮುದ್ರಣವಾಗಿ ದಾಸ್ತಾನು ಇರುವ ಹಳೆಯ ಪುಸ್ತಕಗಳನ್ನು ಸಂಯೋಜಿತ ಕಾಲೇಜಿನ ಗ್ರಂಥಾಲಯಕ್ಕೆ ನೀಡಲು ಸಭೆಯು ಅನುಮೋದಿಸಿತು.** |
| **ವಿಷಯ 32** | ಯು.ಜಿ.ಸಿ. **Open Distance Learning Programme** ಆರಂಭಿಸುವ ಬಗೆಗೆ. |

| | |
|---|---|
| ಟಿಪ್ಪಣಿ | ಯುಜಿಸಿ ನಿಯಮಾನುಸಾರ ಯುಜಿಸಿಯು ODL Programme ಪ್ರಾರಂಭಿಸುವ ಸಂಬಂಧ ಅಧಿಸೂಚನೆಯನ್ನು ಹೊರಡಿಸಿದ್ದು, ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯವು Open Distance Learning Programme ಆರಂಭಿಸಲು ಯುಜಿಸಿಗೆ ಪ್ರಸ್ತಾವನೆ ಸಲ್ಲಿಸಲು ಅನುಮತಿಗಾಗಿ ಸಲ್ಲಿಸಿದೆ. |
| ನಿರ್ಣಯ | **Open Distance Learning Programme ಆರಂಭಿಸಲು** ಯುಜಿಸಿಗೆ ಪ್ರಸ್ತಾವನೆ ಸಲ್ಲಿಸಲು **ಸಭೆಯು ಅನುಮೋದಿಸಿತು.** |
| **ವಿಷಯ 33** | **ವಿಶ್ವವಿದ್ಯಾಲಯದ ಕೇಂದ್ರ ಗ್ರಂಥಾಲಯಕ್ಕೆ ಅವಶ್ಯಕತೆಯಿರುವ ಪುಸ್ತಕಗಳನ್ನು ಖರೀದಿಸುವ ಬಗ್ಗೆ.** |
| ಟಿಪ್ಪಣಿ | ಸಂಸ್ಕೃತ ಪುಸ್ತಕಗಳ ಪ್ರಕಾಶಕರು ವಿರಳವಾಗಿದ್ದು, ಹೆಚ್ಚಿನ ಪುಸ್ತಕಗಳಿಗೆ ಒಂದೇ ಪ್ರಕಾಶಕರಿರುತ್ತಾರೆ. ಆದ್ದರಿಂದ ವಿಶ್ವವಿದ್ಯಾಲಯದ ಕೇಂದ್ರ ಗ್ರಂಥಾಲಯಕ್ಕೆ ಅವಶ್ಯಕತೆಯಿರುವ ಪುಸ್ತಕಗಳನ್ನು ಖರೀದಿಸಲು ಕೆ.ಟಿ.ಪಿ.ಪಿ. ಅಧಿನಿಯಮ 1999ರ 4ಬಿ ಪ್ರಕಾರ ಸಮಿತಿಯನ್ನು ರಚಿಸಲಾಗಿತ್ತು. ದಿ: 19.06.2024ರಂದು ಸದರಿ ಸಮಿತಿಯ ಸಭೆಯಲ್ಲಿ ಏಕ ಪ್ರಕಾಶನದ ಪುಸ್ತಕಗಳನ್ನು ಒಂದೇ ದರಪಟ್ಟಿಯ ಮೂಲಕ ಅಗತ್ಯವಿರುವ ಪುಸ್ತಕಗಳನ್ನು ಖರೀದಿಸಲು ನಿರ್ಣಯಿಸಲಾಗಿದೆ. ಸದರಿ ಸಭೆಯ ನಡಾವಳಿಯನ್ನು ಸಭೆಯ ಅನುಮೋದನೆಗಾಗಿ ಮಂಡಿಸಿದೆ. |
| ನಿರ್ಣಯ | ವಿಶ್ವವಿದ್ಯಾಲಯದ ಕೇಂದ್ರ ಗ್ರಂಥಾಲಯಕ್ಕೆ ಅವಶ್ಯಕತೆಯಿರುವ ಪುಸ್ತಕಗಳನ್ನು ಖರೀದಿಸಲು ಕೆ.ಟಿ.ಪಿ.ಪಿ. ಅಧಿನಿಯಮ 1999ರ 4ಬಿ ಪ್ರಕಾರ ಒಂದೇ ದರಪಟ್ಟಿಯ ಮೂಲಕ ಖರೀದಿಸಲು **ಸಭೆಯು ಅನುಮೋದಿಸಿತು.** |
| **ವಿಷಯ 34** | **ವಿಶ್ವವಿದ್ಯಾಲಯದ ಸಂಸ್ಕೃತ ಹಗಲು ಕಾಲೇಜಿಗೆ ಪ್ರಾಚಾರ್ಯರನ್ನು ನೇಮಿಸುವ ಬಗ್ಗೆ.** |
| ಟಿಪ್ಪಣಿ | ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯದಲ್ಲಿ ಹಗಲು ಮತ್ತು ಸಂಜೆ ಅವಧಿಯಲ್ಲಿ ವಿವಿಧ ಕೋರ್ಸ್‌ಗಳು ನಡೆಯುತ್ತಿದ್ದು, ಹಗಲಿನ ಅವಧಿಯಲ್ಲಿ ಬಿ.ಎ. – ಸಂಸ್ಕೃತ, ಬಿ.ಎ. – ಶಾಸ್ತ್ರ ಮತ್ತು ಬಿಎಸ್.ಸಿ. – ಯೋಗಿಕ್ ಸೈನ್ಸ್ ಕೋರ್ಸಗಳು ನಡೆಯುತ್ತಿವೆ. ಬಿ.ಎ.–ಶಾಸ್ತ್ರ ಕೋರ್ಸ್ ಶಾಸ್ತ್ರ ನಿಕಾಯದಿಂದ ನಡೆಯುತ್ತಿವೆ. ಉಳಿದ ಕೋರ್ಸ್‌ಗಳ ಸುಗಮ ಸಂಚಾಲನೆಗಾಗಿ ಡಾ. ಭೀಮಾ ನಾಯಕ, ಸಹಾಯಕ ಪ್ರಾಧ್ಯಾಪಕರು, ಅಲಂಕಾರ ಶಾಸ್ತ್ರ ಇವರನ್ನು ಹಗಲು ಕಾಲೇಜಿಗೆ ಪ್ರಾಚಾರ್ಯರನ್ನಾಗಿ ನೇಮಿಸಲು ಸಭೆಯ ಅನುಮೋದನೆಗಾಗಿ ಮಂಡಿಸಿದೆ. |
| ನಿರ್ಣಯ | **ಡಾ. ಭೀಮಾ ನಾಯಕ, ಸಹಾಯಕ ಪ್ರಾಧ್ಯಾಪಕರು, ಅಲಂಕಾರಶಾಸ್ತ್ರ –ಇವರನ್ನು ಹಗಲು ಕಾಲೇಜಿಗೆ ಪ್ರಾಚಾರ್ಯರನ್ನಾಗಿ ನೇಮಿಸಲು ಸಭೆಯು ಅನುಮೋದಿಸಿತು. ಬಿ.ಎ.–ಶಾಸ್ತ್ರ ಕೋರ್ಸ್‌ಅನ್ನು ಶಾಸ್ತ್ರನಿಕಾಯದ ಅಡಿಯಲ್ಲಿ ಡೀನರು ನಿರ್ವಹಿಸಲು ಸೂಚಿಸಿತು.** |
| **ವಿಷಯ 35** | **ವಿವಿಧ ವಿಭಾಗಗಳಿಗೆ ಸಂದರ್ಶಕ ಪ್ರಾಧ್ಯಾಪಕರನ್ನು ನೇಮಿಸುವ ಬಗ್ಗೆ.** |
| ಟಿಪ್ಪಣಿ | ವಿಶ್ವವಿದ್ಯಾಲಯದ "ಯೋಗ ಥೆರಪಿ ಮತ್ತು ಕೌನ್ಸೆಲಿಂಗ" ವಿಭಾಗಕ್ಕೆ ಡಾ. ಮಮತಾ ಭಾಗ್ವತ್ ಇವರನ್ನು ಮತ್ತು ಅಲಂಕಾರಶಾಸ್ತ್ರ ವಿಭಾಗಕ್ಕೆ ಡಾ. ಅರ್ಜುನ್ ಭಾರದ್ವಾಜ್ ಇವರನ್ನು ಸಂದರ್ಶಕ ಪ್ರಾಧ್ಯಾಪಕರಾಗಿ ನೇಮಿಸುವ ಬಗ್ಗೆ ಸಭೆಯ ಅನುಮೋದನೆಗಾಗಿ ಮಂಡಿಸಿದೆ. |
| ನಿರ್ಣಯ | **"ಯೋಗ ಥೆರಪಿ ಮತ್ತು ಕೌನ್ಸೆಲಿಂಗ್" ವಿಭಾಗಕ್ಕೆ ಡಾ. ಮಮತಾ ಭಾಗ್ವತ್ ಇವರನ್ನು ಮತ್ತು ಅಲಂಕಾರಶಾಸ್ತ್ರ ವಿಭಾಗಕ್ಕೆ ಡಾ. ಅರ್ಜುನ್ ಭಾರದ್ವಾಜ್ ಇವರನ್ನು ಸಂದರ್ಶಕ ಪ್ರಾಧ್ಯಾಪಕರಾಗಿ ನೇಮಿಸಲು ಸಭೆಯು ಅನುಮೋದಿಸಿತು.** |
| **ವಿಷಯ 37** | **ಅರ್ಹ ಅಧ್ಯಾಪಕರಿಗೆ ಪಿಹೆಚ್.ಡಿ. ಮಾರ್ಗದರ್ಶಕತ್ವ ನೀಡುವ ಬಗ್ಗೆ.** |
| ಟಿಪ್ಪಣಿ | ವಿಶ್ವವಿದ್ಯಾಲಯದ ಅಧಿಸೂಚನೆಯಂತೆ ಹಲವು ಅಧ್ಯಾಪಕರು ಪಿಹೆಚ್.ಡಿ. ಮಾರ್ಗದರ್ಶಕತ್ವಕ್ಕಾಗಿ ಅರ್ಜಿ ಸಲ್ಲಿಸಿದ್ದು, ಪರೀಶೀಲನಾ ಸಮಿತಿಯು ಈ ಅರ್ಜಿಗಳ ಪರಿಶೀಲನೆ ನಡೆಸಿ ವರದಿ ಸಲ್ಲಿಸಿದೆ. ಅದರಂತೆ ಅರ್ಹ ಅಧ್ಯಾಪಕರಿಗೆ ಪಿಹೆಚ್.ಡಿ. ಮಾರ್ಗದರ್ಶಕತ್ವ ನೀಡುವ ಬಗ್ಗೆ ಸಭೆಯ ಅನುಮೋದನೆಗಾಗಿ ಮಂಡಿಸಿದೆ. |
| ನಿರ್ಣಯ | **Research Advisory Committee ಸಭೆಯ ನಿರ್ಣಯದಂತೆ ಅರ್ಹ ಅಧ್ಯಾಪಕರಿಗೆ ಪಿಹೆಚ್.ಡಿ. ಮಾರ್ಗದರ್ಶಕತ್ವ ನೀಡಲು ಸಭೆಯು ಅನುಮೋದಿಸಿತು.** |

| ಅಧ್ಯಕ್ಷರ ಅಪ್ಪಣೆಯ ಮೇರೆಗೆ ಇನ್ನಿತರ ವಿಷಯಗಳು | |
|---|---|
| ವಿಷಯ 1 | **ನಿಗದಿತ ಅವಧಿಯ ಒಳಗೆ ಪಿಹೆಚ್.ಡಿ. ಪ್ರಬಂಧದ ಮೌಲ್ಯಮಾಪನ ಮಾಡಿ ಕಳುಹಿಸದಿದ್ದಲ್ಲಿ ಬಾಹ್ಯ ಮೌಲ್ಯಮಾಪಕರ ಬಲಾವಣೆ ಮಾಡುವ ಬಗ್ಗೆ.** |
| ಟಿಪ್ಪಣಿ | ಯು.ಜಿ.ಸಿ./ವಿಶ್ವವಿದ್ಯಾಲಯದ ಪಿಹೆಚ್.ಡಿ. ನಿಯಮದಂತೆ ಶೋಧಪ್ರಬಂಧವನ್ನು ಬಾಹ್ಯ ಮೌಲ್ಯಮಾಪನಕ್ಕಾಗಿ ಬೇರೆ ವಿಶ್ವವಿದ್ಯಾಲಯದ ತಜ್ಞ ವಿದ್ವಾಂಸರಿಗೆ ಕಳುಹಿಸಲಾಗುತ್ತಿದೆ. ಆದರೆ ಕೆಲವು ಮೌಲ್ಯಮಾಪಕರು ನಿಗದಿತ 45 ದಿನಗಳ ಅವಧಿಯೊಳಗೆ ಮೌಲ್ಯಮಾಪನ ಮಾಡದೇ ಇರುವುದರಿಂದ ಕೆಲವು ಸಂಶೋಧನಾರ್ಥಿಗಳಿಗೆ ತೊಂದರೆಯಾಗುತ್ತಿದೆ. ಆದ್ದರಿಂದ ನಿಗದಿತ ಅವಧಿಯ ಒಳಗೆ ಪಿಹೆಚ್. ಡಿ. ಪ್ರಬಂಧದ ಮೌಲ್ಯಮಾಪನ ಮಾಡಿ ಕಳುಹಿಸದಿದ್ದಲ್ಲಿ ಬಾಹ್ಯ ಮೌಲ್ಯಮಾಪಕರ ಬದಲಾವಣೆ ಮಾಡುವ ಬಗ್ಗೆ ಸಭೆಯ ನಿರ್ಣಯಕ್ಕಾಗಿ ಮಂಡಿಸಿದೆ. |
| ನಿರ್ಣಯ | **ಯು.ಜಿ.ಸಿ./ವಿಶ್ವವಿದ್ಯಾಲಯದ ನಿಯಮಾನುಸಾರ ಬಾಹ್ಯ ವಿದ್ವಾಂಸರು ಶೋಧಪ್ರಬಂಧವನ್ನು 45 ದಿನಗಳೊಳಗೆ ಮೌಲ್ಯಮಾಪನ ಮಾಡಿ, ವರದಿಯನ್ನು ಕಳುಹಿಸದಿದ್ದಲ್ಲಿ, ನಿಯಮಾನುಸಾರ ಅವರಿಗೆ 3 ಸೂಚನಾ ಪತ್ರವನ್ನು ಕಳುಹಿಸಬೇಕು. ಆನಂತರವೂ ಮೌಲ್ಯಮಾಪನ ವರದಿಯನ್ನು ಕಳುಹಿಸದಿದ್ದರೆ ಬಾಹ್ಯ ಮೌಲ್ಯಮಾಪಕರನ್ನು ಬದಲಾವಣೆ ಮಾಡಲು ಸಭೆಯು ಅನುಮೋದಿಸಿತು.** |
| ವಿಷಯ 2 | **2023-24ನೇ ಸಾಲಿನ ವಾರ್ಷಿಕ ಲೆಕ್ಕಪತ್ರಗಳನ್ನು ಅನುಮೋದಿಸುವ ಬಗೆಗೆ.** |
| ಟಿಪ್ಪಣಿ | ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯವು ತನ್ನ ಹಣಕಾಸಿನ ವಹಿವಾಟನ್ನು Tally ತಂತ್ರಾಂಶದ ಮೂಲಕ ಹಣಕಾಸು ವ್ಯವಹಾರಗಳನ್ನು ಮಾಡುತ್ತಿದೆ. ಹಣಕಾಸಿನ ವ್ಯವಹಾರಗಳನ್ನು ಇ-ಟೆಂಡರ್ ಮೂಲಕ ಆಯ್ಕೆಯಾಗಿರುವ M/S. D.N Joshi & Co. ಇವರಿಂದ ನಿರ್ವಹಿಸಲಾಗುತ್ತಿದೆ. ಸದರಿಯವರು 2023-24ನೇ ಸಾಲಿನ ವಾರ್ಷಿಕ ಲೆಕ್ಕಪತ್ರಗಳನ್ನು (Balance Sheet, Receipts & Payment and Income & Expenditure) ಸಿದ್ದಪಡಿಸಿ ಸಲ್ಲಿಸಿದ್ದಾರೆ. ಸಲ್ಲಿಸಿರುವ ವಾರ್ಷಿಕ ಲೆಕ್ಕಪತ್ರಗಳನ್ನು ಅನುಮೋದನೆಗಾಗಿ ಸಭೆಯ ಮುಂದೆ ಮಂಡಿಸಿದೆ. |
| ನಿರ್ಣಯ | **2023-24ನೇ ಸಾಲಿನ ವಾರ್ಷಿಕ ಲೆಕ್ಕಪತ್ರಗಳನ್ನು ಸಭೆಯು ಅನುಮೋದಿಸಿತು.** |

**ಶ್ರೀ ವಿಶ್ವನಾಥ ಪಿ. ಹಿರೇಮಠ, ಕ.ಆ.ಸೇ.**
ಕುಲಸಚಿವರು
**ಸದಸ್ಯ ಕಾರ್ಯದರ್ಶಿಗಳು**

**ಡಾ. ಅಹಲ್ಯಾ ಎಸ್.**
ಕುಲಪತಿಗಳು
**ಅಧ್ಯಕ್ಷರು**